DOP 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15 ಫೆಬ್ರವರಿ 2009

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754
ಸಂಪುಟ-9 ಸಂಚಿಕೆ-2 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

## ಆಟೋಟಗಳು ಸಮಾಜದ ಸಂಘಟನೆಗೆ ಸಹಕಾರಿ : ಶ್ರೀ ಸುಧಾಕರ ಶೆಟ್ಟಿ


ಸಮಾರಂಭದಲ್ಲಿ ಸಮಾಜ ಬಾಂಧವರು


ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಸುಧಾಕರ ಶೆಟ್ಟಿ

"ಇಂದಿನ ಪರಿಸ್ಥಿತಿಯಲ್ಲಿ ಎಲ್ಲ ಸಮಾಜವು ಸಾಮಾಜಿಕವಾಗಿ ದೃಢತೆಯನ್ನು ತಂದುಕೊಳ್ಳಬೇಕಾದ ಅವಶ್ಯಕತೆ ಬಹಳಷ್ಟಿದೆ. ಅದಕ್ಕಾಗಿ ಬೇರೆಲ್ಲಾ ವಿಧಾನಕ್ಕಿಂತಲೂ ನೀವು ಆರಿಸಿಕೊಂಡ ಕ್ರೀಡಾ ಸಂಘಟನೆಯು ಅತ್ಯುತ್ತಮ ವಿಧಾನ. ಕಳೆದ 17 ವರ್ಷಗಳಿಂದ ಸತತವಾಗಿ ಹೆಚ್ಚು ಪ್ರಚಾರವಿಲ್ಲದೆ, ಬಹಳ ದೂರದ ಊರಿನಿಂದಲೂ ಬಂದು ಸೋಲು-ಗೆಲುವುಗಳನ್ನು ಲೆಕ್ಕಿಸದೆ, ಒಂದು ಸಂಘಟನೆಯನ್ನು ಬಲಪಡಿಸುವಲ್ಲಿ ಇಡೀ ಸಮಾಜವೇ ಮುಂದಾಗಿರುವುದನ್ನು ನೋಡಿ ಅತ್ಯಂತ ಸಂತೋಷವಾಗಿದೆ. ಅದಕ್ಕಾಗಿ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವನ್ನು, ಅದರ ಪದಾಧಿಕಾರಿಗಳನ್ನು ಹಾಗೂ ಸರ್ವಸದಸ್ಯರನ್ನು ಅಭಿನಂದಿಸುತ್ತಿದ್ದೇನೆ" ಎಂದು ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಉತ್ತಮ ಕ್ರೀಡಾಳು ಹಾಗೂ ಉಡುಪಿ ಶಾರದಾ ಇಂಟರ್‌ನ್ಯಾಶನಲ್ ಹೋಟೇಲ್‌ನ ಸ್ಥಾಪಕರಾದ ಶ್ರೀ ಸುಧಾಕರ್ ಶೆಟ್ಟಿ ಅಭಿಪ್ರಾಯಪಟ್ಟರು.


ಅವರು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಯುವ ಹಾಗೂ ಕ್ರೀಡಾ ವೇದಿಕೆಗಳ ಸಹಕಾರದಿಂದ ತಾ.25-01-2009ರಂದು ಉಡುಪಿ ಎಂ.ಜಿ.ಎಂ. ಕ್ರೀಡಾಂಗಣದಲ್ಲಿ ನಡೆದ ಶ್ರೀ ಶಾರದಾ ಟ್ರೋಫಿ-2009ರ ಕ್ರಿಕೆಟ್ ಪಂದ್ಯಾಟದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಮಂಗಳೂರು ಎಂ.ಸಿ.ಎಫ್.ನ ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀ ಪ್ರಭಾಕರ ರಾವ್ ಮಾತಾಡುತ್ತಾ "ಯುವಕರಲ್ಲಿ ಪರಸ್ಪರ ಪರಿಚಯ, ದೈಹಿಕ ಬಲವರ್ಧನೆ, ಜೊತೆಗೆ ಸಾಮಾಜಿಕ ಸಂಘಟನೆಗೆ ಸಹಕಾರಿಯಾಗುವ ಈ ಪಂದ್ಯಾಟವನ್ನು ಪ್ರತೀ ವರ್ಷವೂ ಅತ್ಯಂತ ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಇದು ನಮ್ಮ ಸಮಾಜಕ್ಕೊಂದು ಹೆಮ್ಮೆಯ ವಿಷಯ" ಎಂದು ಹೇಳಿದರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ಸಮಾರಂಭದ ಅಧ್ಯಕ್ಷರನ್ನು ಹಾಗೂ ಅತಿಥಿಗಳನ್ನು ಎಲ್ಲರಿಗೆ ಪರಿಚಯಿಸಿ, ಶ್ರೀ ಶಾರದಾ ಟ್ರೋಫಿ ಪಂದ್ಯಾಟದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ವೇಣುಗೋಪಾಲ್ ರಾವ್, ಕೋಶಾಧಿಕಾರಿ ಶ್ರೀ ಎಮ್. ಸದಾನಂದ ರಾವ್, ಕ್ರೀಡಾ ವೇದಿಕೆಯ ಶ್ರೀ ಪಿ.ಎಂ. ನಾಗರಾಜ್ ಮತ್ತು ಯುವವೇದಿಕೆಯ ಶ್ರೀ ಜಗದೀಶ್ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

(3ನೇ ಪುಟಕ್ಕೆ ...)


ಉಡುಪಿ 'ಬಿ' ಟೀಮ್ ಟ್ರೋಫಿಯನ್ನು ಮುಖ್ಯ ಅತಿಥಿಗಳಿಂದ ಸ್ವೀಕರಿಸುತ್ತಿರುವ ಸಂತಸದಲ್ಲಿ


ಶ್ರೀ ಪ್ರಭಾಕರ ರಾವ್‌ರಿಂದ ಕೋದಂಡರಾಮ ಇವರಿಗೆ ಬೆಸ್ಟ್ ಬ್ಯಾಟ್ಸ್‌ಮನ್ ಪ್ರಶಸ್ತಿ ಪ್ರದಾನ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)**
**ಕುಂಜಿಬೆಟ್ಟು, ಉಡುಪಿ - 2.**

### ಶ್ರೀ ಶಾರದಾ ದೇವಸ್ಥಾನದಲ್ಲಿ

**ತಾ.23-02-2009ರಂದು ಸೋಮವಾರ**

### ಶ್ರೀ ಮಹಾಶಿವರಾತ್ರಿ ಪೂಜೆಯು

ಜರಗಲಿರುವುದು. ಬೆಳಿಗ್ಗೆ 9-00 ಗಂಟೆಯಿಂದ ನಡೆಯುವ ಪಾರಾಯಣ, ಏಕಾದಶ ರುದ್ರಾಭಿಷೇಕ, ಭಜನೆ ಮೊದಲಾದ ಕಾರ್ಯಕ್ರಮಗಳಲ್ಲಿ ಸಮಾಜಬಾಂಧವರು ಭಾಗವಹಿಸಿ ಶ್ರೀ ದೇವರಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.

**- ಕಾರ್ಯದರ್ಶಿ**

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102.**

॥ ಶಾರದಾ ಶಾರದಾಂಭೋಜ ವದನಾ ವದನಾಂಬುಜೇ ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸನ್ನಿಧಿಂ ಕ್ರಿಯಾತ್ ॥

### ಕರೆಯೋಲೆ



ಪ್ರಿಯರೇ,

ಸ್ವಸ್ತಿ! ಶ್ರೀ ಸರ್ವಧಾರಿ ನಾಮ ಸಂ।ರದ ಕುಂಭ ಮಾಸ ದಿನ ೩೦ ಸಲುವ ಮೀನ ಸಂಕ್ರಮಣ ತಾ.14-03-2009ನೇ ಶನಿವಾರ

### ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ಮಹೋತ್ಸವವು

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

| **ಕೆ. ವೇಣುಗೋಪಾಲರಾವ್** | **ಅಂಬಲಪಾಡಿ ಕೃಷ್ಣರಾವ್** | **ಸಿ.ಎಸ್.ರಾವ್** |
|---|---|---|
| ಕಾರ್ಯದರ್ಶಿ | ಗೌರವಾಧ್ಯಕ್ಷರು | ಅಧ್ಯಕ್ಷರು |

**ಕಾರ್ಯಕ್ರಮ : *ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ***
***ಗಂಟೆ 11-00ರಿಂದ ರಾಜ್ಯೋತ್ಸವ ಪುರಸ್ಕೃತ ಶ್ರೀ ನೀಲಾವರ ಲಕ್ಷ್ಮೀನಾರಾಯಣರಾವ್ ಇವರಿಂದ ಗಮಕವಾಚನ ಮತ್ತು ಹವ್ಯಾಸಿ ತಾಳಮದ್ದಳೆ ಅರ್ಥದಾರಿ ಶ್ರೀ ಬಾರ್ಕೂರು ನಾಗೇಶ ರಾವ್ ಇವರಿಂದ ಪ್ರವಚನ***

ಸಮಾಜಬಾಂಧವರು ಇದನ್ನೇ ಆಮಂತ್ರಣವೆಂದು ತಿಳಿಯಬೇಕಾಗಿ ವಿನಂತಿ

**ತಾ.15-03-2009ರಂದು ಲಕ್ಷ ಕುಂಕುಮಾರ್ಚನೆ (ವಿವರ 8ನೇ ಪುಟದಲ್ಲಿ)**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಯು. ಅರವಿಂದ ಕುಮಾರ್
ಎಚ್.ಎನ್. ಶ್ಯಾನುಭಾಗ್
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್
ರೂಪಾ ವಸಂತ ರಾವ್
ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ ರಾವ್
ಯು. ಪ್ರಫುಲ್ಲಚಂದ್ರ ರಾವ್

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಲೇಖನಗಳು ಅಥವಾ ಪತ್ರಿಕೆಯ ಇತರ ಯಾವುದೇ ವಿಷಯಗಳ ಬಗ್ಗೆ ಯಾವುದೇ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಕಷ್ಟಗಳು ಮನುಷ್ಯನಿಗೆ ಬರುವುದೇ ಹೊರತು ಮರಕ್ಕೆ ಬರುವುದಿಲ್ಲ ಎಂಬ ಮಾತು ಹಿರಿಯರಿಂದ ಬಂದದ್ದು. ಅಂದರೆ ಮನುಷ್ಯನಿಗೆ ತನ್ನ ಜೀವನದಲ್ಲಿ ಕಷ್ಟಗಳು ಆಗಾಗ ಬರುತ್ತಲೇ ಇರುತ್ತದೆ.

ಯಸ್ಯ ಬುದ್ಧಿಃ ಪರಿವೇತ್ತಮತೀತೇನ ಸಾನ್ತ್ವಯೇತ್।
ಅನಾಗತೇನ ದುರ್ಬುದ್ಧಿಂ ಪ್ರತ್ಯುತ್ಪನ್ನೇನ ಪಂಡಿತಮ್॥

ಯಾವಾತನು ಸಂಕಷ್ಟಕ್ಕೊಳಗಾಗಿದ್ದಾನೋ ಆತನಿಗೆ ಅವನಿಗಿಂತ ಹಿಂದಿನ ಕಾಲದಲ್ಲಿ ಕಷ್ಟಪಟ್ಟವರ ಕಷ್ಟಗಳನ್ನು ತಿಳಿಸಬೇಕು. ಉದಾಹರಣೆಗಾಗಿ ನಳ, ಶ್ರೀರಾಮಚಂದ್ರ, ಪಾಂಡವರು, ಸತ್ಯಹರಿಶ್ಚಂದ್ರ ಮೊದಲಾದವರ ಕಠಿಣ ಪರಿಸ್ಥಿತಿಗಳನ್ನು ವಿವರಿಸಬೇಕು. ಹಾಗೆಯೇ ಕೊನೆಗವರು ಅನುಭವಿಸಿದ ಸುಖ ಪ್ರಾಪ್ತಿಯ ಬಗ್ಗೆಯೂ ತಿಳಿಸಬೇಕು. ಅಲ್ಲದೆ ಪಂಡಿತನಾದವನನ್ನು ಸಂತೈಸಲು ಪ್ರತ್ಯುತ್ಪನ್ನಮತಿಯೂ ನಮಗಿರಬೇಕು.

ನಮಗಿಂತಲೂ ದೊಡ್ಡವರನ್ನು, ಹಿರಿಯ ಸಾಧಕರನ್ನು ನೋಡಿ, ಅವರ ಗುರಿ ನಮಗೆ ಇರಬೇಕೆಂದು ಭಾವಿಸಬೇಕು. ನಮಗಿಂತ ಕೆಳ ಪರಿಸ್ಥಿತಿಯಲ್ಲಿ ಇರುವವರನ್ನು ಕಂಡು ಮನಸ್ಸಿನಲ್ಲಿ ಶಾಂತಿ ತಂದುಕೊಳ್ಳಬೇಕು.

ಯಾವುದೇ ಕೆಲಸಕ್ಕೆ ತೊಡಗಬೇಕಾದರೆ ನಷ್ಟ ಅನುಭವಿಸಿದ ಮತ್ತೊಂದನ್ನು ಅಥವಾ ಮತ್ತೊಬ್ಬನನ್ನು ಕಂಡು ದಿಗಿಲುಗೊಂಡು ನನಗಂತಹ ಸಾಹಸಬೇಡ' ಎಂದು ಹೆದರಿ ಸುಮ್ಮನೆ ತಮ್ಮಷ್ಟಕ್ಕೆ ಇರುವವರೇ ಹೆಚ್ಚು. ಅಂತವರು ಜೀವನದಲ್ಲಿ ಎಂದೂ ಮುಂದೆ ಸಾಗಲು ಸಾಧ್ಯವಿಲ್ಲ. ಅಂತವರು ಯಾವಾಗಲೂ ತನಗಿಂತ ಮುನ್ನಡೆಯಲ್ಲಿರುವಾತನನ್ನು ಅಥವಾ ಮುನ್ನಡೆ ಇರುವ ಮತ್ತೊಂದನ್ನು ಅವಲೋಕಿಸಬೇಕು. ಅದು ಅಥವಾ ಆತ ಹೇಗೆ ನಮಗಿಂತಲೂ ಹೆಚ್ಚು ಮುನ್ನಡೆ ಸಾಧನೆ ಮಾಡಿದ್ದಾನೆ? ನಮಗೆ ಆ ಸ್ಥಾನಕ್ಕೆ ಏರಲು ಯಾಕೆ ಆಗಲಿಲ್ಲ? ಎನ್ನುವ ವಿಶ್ಲೇಷಣೆಯನ್ನು ನಮ್ಮಲ್ಲಿ ನಾವು ಮಾಡಿಕೊಳ್ಳಬೇಕು. ಆದರೆ ಮಾತ್ರ ತಾನೂ ಅವರಂತೆ ಮುನ್ನಡೆಯನ್ನು ಸಾಧಿಸಲು ಸಾಧ್ಯವಾದೀತು.

ಇದಕ್ಕಿಂತಲೂ ಕಾರ್ಯಸಾಧನೆ ಮಾಡುವಾತನ ಮುಖಭಾವ, ಮಾತು ಇತರರಿಗೆ ತಿಳಿಯದಂತೆ ರಹಸ್ಯವನ್ನು ಹಿಡಿದಿಟ್ಟಿರಬೇಕು. ತಾನು ಸಾಧನೆಗಾಗಿ ಮಾಡುತ್ತಿರುವ ಮುಂದಾಲೋಚನೆಯ ಬಗ್ಗೆ ಇತರರಿಗೆ ಸುಳಿವು ಸಿಗದಂತೆ ಎಚ್ಚರಿಕೆ ವಹಿಸಬೇಕು. ಏಕೆಂದರೆ ಕರ್ಮಸಾಧನೆಯಲ್ಲಿ ಸಫಲನಾಗದಿದ್ದರೆ ಮೊದಲೇ ಹೇಳಿದ ತನ್ನನ್ನು ಬೊಗಳೆ ಬಿಡುವವನು-ಸುಳ್ಳ-ಎಂಬ ತಿರಸ್ಕಾರ ಭಾವದಿಂದ ನೋಡ ತೊಡಗುವರು. ಸಾಮಾಜಿಕ ಟೀಕೆಗೂ ಒಳಗಾಗುವನು. ಕಾರ್ಯಸಾಧನೆ ಮಾಡಿದ ನಂತರ ಈ ಭಾವವನ್ನು ವ್ಯಕ್ತಪಡಿಸಿದರೆ ತಪ್ಪಾಗಲಾರದು. ಆದ್ದರಿಂದ ನಾವೆಲ್ಲಾ "**ಆಡದೆ ಮಾಡುವವರಾಗಿ ರೂಢಿಯೊಳಗುತ್ತಮರು**" ಎನಿಸಿಕೊಳ್ಳೋಣ.

# ಶ್ರೀ ಕೃಷ್ಣಾಯನ (ಶ್ರೀ ಮದ್ಭಾಗವತಾನುಸಾರಿ)

**- ಆತ್ಮಾರಾಮ ಶಾಸ್ತ್ರೀ, ಬೆಂಗಳೂರು**

## ಪೀಠಿಕೆ

ಅದು ಇಪ್ಪತ್ತೆಂಟನೆಯ ದ್ವಾಪರಯುಗ. ಆಗ ಯಯಾತಿಯ ಮಗನಾದ ಯದುವಿನ ಹೆಸರಿನಿಂದ ಪ್ರಸಿದ್ಧವಾದ ವಂಶವೊಂದಿತ್ತು. ಅದೇ ಯದು ವಂಶ. ಆ ಯದುವಂಶದಲ್ಲಿ ಹುಟ್ಟಿದವರೆಲ್ಲ ಯಾದವರೆನಿಸಿದರು. ಹಾಗೇ ಇದೇ ವಂಶದಲ್ಲಿ ಬಂದ ವೀತಿಹೋತ್ರನ ಮಗ ಮಧು ಎಂಬವನೂ ಪ್ರಖ್ಯಾತನಾದ ಅರಸು. ಆದುದರಿಂದ ಮಧುವಿನ ವಂಶಸ್ಥರೆಲ್ಲ ಮಾಧವರೆನಿಸಿದರು. ಈ ಮಧುವಿಗೆ ನೂರು ಜನ ಮಕ್ಕಳಿದ್ದರು. ಅವರಲ್ಲಿ ಹಿರಿಯವನಾದ ವೃಷ್ಣಿ ವಿಶೇಷ ಕೀರ್ತಿಶಾಲಿಯಾಗಿದ್ದನು, ಅದಕ್ಕೆ ಅವನ ಪೀಳಿಗೆಯವರು ವಾರ್ಷ್ಣೇಯರೆನಿಸಿದರು. ಯಯಾತಿಯ ಇನ್ನೊಬ್ಬ ಮಗನಾದ ಅನುವಿನ ಪೀಳಿಗೆಯಲ್ಲಿ ಆಹುಕನೆಂಬ ರಾಜನಾದನು. ಅವನಿಗೆ ದೇವಕ, ಉಗ್ರಸೇನರೆಂಬ ಇಬ್ಬರು ಮಕ್ಕಳಿದ್ದರು. ದೇವಕನಿಗೆ ದೇವವಾನ್, ಉಪದೇವ, ಸುದೇವ, ದೇವವರ್ಧನ ಎಂಬ ನಾಲ್ಕು ಗಂಡು ಮಕ್ಕಳೂ, ಧೃತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ, ದೇವರಕ್ಷಿತಾ, ಸಹದೇವಾ, ದೇವಕಿ ಎಂಬ ಏಳು ಹೆಣ್ಣು ಮಕ್ಕಳೂ ಆದರು. ಉಗ್ರಸೇನನಿಗೆ ಕಂಸ, ಸುನಾಮ, ನ್ಯಗ್ರೋಧ, ಕಂಕ, ಶಂಕು, ಸುಹೂ, ರಾಷ್ಟ್ರಪಾಲ, ಸೃಷ್ಟಿ, ತುಷ್ಟಿಮಾನ್ ಎಂಬ ಒಂಭತ್ತು ಗಂಡು ಮಕ್ಕಳೂ, ಕಂಸಾ, ಕಂಸವತಿ, ಕಂಕಾ, ಶೂರಭೂ, ರಾಷ್ಟ್ರಪಾಲಿಕಾ ಎಂಬ ಐದು ಹೆಣ್ಣು ಮಕ್ಕಳು ಆದರು.

ಇದೇ ಯಾದುವಂಶದ ಇನ್ನೊಂದು ಕವಲಿನಲ್ಲಿ ದೇವಮೀಢನೆಂಬ ರಾಜನಿದ್ದನು. ದೇವಮೀಢನ ರಾಣಿ ಮಾರಿಷೆ. ಇವರ ಮಗ ಶೂರ ಅಥವಾ ಶೂರಸೇನ. ಶೂರನಿಗೆ ವಸುದೇವ, ದೇವಭಾಗ, ದೇವಶ್ರವ, ಆನಕ, ಸೃಂಜಯ, ಶ್ಯಾಮಕ, ಕಂಕ, ಶಮೀಕ, ವತ್ಸಕ, ವೃಕ ಎಂಬ ಹತ್ತು ಗಂಡು ಮಕ್ಕಳೂ, ಪ್ರಥಾ, ಶ್ರುತದೇವಾ, ಶ್ರುತಕೀರ್ತಿ, ಶ್ರುತಶ್ರವಾ, ರಾಜಾಧಿಜೀವಿ ಎಂಬ ಐದು ಹೆಣ್ಣು ಮಕ್ಕಳೂ ಹುಟ್ಟಿದರು. ವಸುದೇವನು ಜನಿಸಿದಾಗ ದೇವತೆಗಳು ಆನಕ (ದುಡಿ) ಮತ್ತು ದುಂದುಭಿಯನ್ನು ಬಾರಿಸಿದರು. ಆದುದರಿಂದ ವಸುದೇವನಿಗೆ ಆನಕದುಂದುಭಿ ಎಂಬ ಹೆಸರೂ ಬಂತು. ವಸುದೇವನು ದೇವಕನ ಏಳು ಹೆಣ್ಣು ಮಕ್ಕಳನ್ನೂ ಮದುವೆಯಾಗಿದ್ದನು. ಶೂರನ ಸೋದರತ್ತೆಯ ಮಗನಾದ ಕುಂತಿಭೋಜನು ಕುಂತಿದೇಶವನ್ನಾಳುತ್ತಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಆದುದರಿಂದ ಅವನು ಶೂರನ ಮಗಳಾದ ಪೃಥೆಯನ್ನು ದತ್ತು ತೆಗೆದುಕೊಂಡನು. ಇವಳೇ ಮುಂದೆ ಕುಂತಿಯೆಂದು ಪ್ರಸಿದ್ಧಳಾದಳು.

ವಸುದೇವನು ಪುರುರಾಜನ ಐದು ಮಂದಿ ಪುತ್ರಿಯರನ್ನೂ ವಿವಾಹವಾಗಿದ್ದನು. ಇವರಲ್ಲಿ ಹಿರಿಯವಳು ರೋಹಿಣಿ.

ವಸುದೇವನ (ಕುಂತಿಯ) ತಂಗಿ ಶ್ರುತದೇವಾ ಎಂಬವಳು ಕರೂಷ ದೇಶದ ರಾಜನಾದ ವೃದ್ಧಶರ್ಮನ ಕೈಹಿಡಿದಳು. ಇವರ ಮಗ ದಂತವಕ್ತ್ರ (ದಂತವಕ್ರ ಎಂದೂ ಹೆಸರಿದೆ). ಕೇಕಯದ ಅರಸನಾದ ಧೃಷ್ಟಕೇತುವು ಶ್ರುತಕೀರ್ತಿಯನ್ನು ಮದುವೆಯಾಗಿ ಸಂತರ್ದನ ಮೊದಲಾದ ಐದು ಮಂದಿ ಮಕ್ಕಳನ್ನು ಪಡೆದನು. ಶ್ರುತದೇವೆಯನ್ನು ವಿವಾಹವಾದನು. ಚೇದಿ ರಾಜನಾದ ದಮಘೋಷ. ಇವರ ಮಗ ಶಿಶುಪಾಲ. ರಾಜಾಧಿದೇವಿಯು ಜಯಸೇನನನ್ನು ಮದುವೆಯಾಗಿ ವಿಂದ, ಅನುವಿಂದ ಎಂಬಿಬ್ಬರು ಮಕ್ಕಳ ತಾಯಿಯಾದಳು. ಅವರು ಅವಂತಿಗೆ ಅರಸರು.

ವಸುದೇವನ ತಮ್ಮಂದಿರಲ್ಲಿ ದೇವಭಾಗನು ಉಗ್ರಸೇನನ ಪುತ್ರಿಯರಲ್ಲಿ ಕಂಸೆಯನ್ನೂ, ದೇವಶ್ರವನು ಕಂಸವತಿಯನ್ನೂ, ಸೃಂಜಯನು ರಾಷ್ಟ್ರಪಾಲಿಕೆಯಯನ್ನೂ, ಶ್ಯಾಮಕನು ಶೂರಭೂವನ್ನೂ, ಆನಕನು ಕಂಕೆಯನ್ನೂ ಮದುವೆಯಾದರು. ಉಳಿದ ತಮ್ಮಂದಿರು ಬೇರೆ ಬೇರೆ ಕಡೆಗಳಿಂದ ಮದುವೆಯಾದರು.

ವಸುದೇವನಿಗೆ ಭಾಗವತದ ಪ್ರಕಾರ ಹದಿನೆಂಟು ಹೆಂಡಂದಿರೂ, ಭಾರತದ ಪ್ರಕಾರ ಹದಿನಾಲ್ಕು ಹೆಂಡಂದಿರೂ ಇದ್ದರು. ಅದೇನೇ ಇದ್ದರೂ ಅವರಲ್ಲಿ ಪ್ರಮುಖರು ಈರ್ವರು- ದೇವಕಿ ಮತ್ತು ರೋಹಿಣಿ, ವಸುದೇವನಿಗೆ ದೇವಕಿಯಲ್ಲಿ ಎಂಟು ಗಂಡು ಮಕ್ಕಳಾದರು. ಅವರು ಕ್ರಮವಾಗಿ ಕೀರ್ತಿಮಾನ್, ಸುಷೇಣ, ಭದ್ರಸೇನ, ಋಜು, ಸಮ್ಮರ್ದನ, ಭದ್ರ, ಬಲರಾಮ, ಶ್ರೀ ಕೃಷ್ಣ, ಸುಭದ್ರೆ ಎಂಬ ಹೆಣ್ಣು ಮಗಳೂ ಇದ್ದಳು. ಮೊದಲ ಆರು ಗಂಡು ಮಕ್ಕಳು ಕಂಸನ ಕ್ರೌರ್ಯಕ್ಕೆ ಬಲಿಯಾದರು.

(6ನೇ ಪುಟಕ್ಕೆ ...)

## ಕಾಸರಗೋಡು : ಮಹಿಳಾ ಘಟಕದ ಸಂಚಾಲಕಿಯಾಗಿ ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ



ಕನ್ನಡ ಸಾಹಿತ್ಯ ಪರಿಷತ್ ಕೇರಳ ಗಡಿನಾಡ ಘಟಕ ಕಾಸರಗೋಡು ಇದರ ಮಹಿಳಾ ಘಟಕದ ಪ್ರಧಾನ ಸಂಚಾಲಕಿಯಾಗಿ ಈಗಾಗಲೇ ಮೂರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಶ್ರೀಮತಿ ಜಯಶ್ರೀ ಶ್ರೀಕೃಷ್ಣಯ್ಯ ಅನಂತಪುರ ಅವರು ಮುಂದಿನ ಮೂರು ವರ್ಷಗಳಿಗೆ ಮಹಿಳಾ ಘಟಕದ ಪ್ರಧಾನ ಸಂಚಾಲಕಿಯಾಗಿ ಸರ್ವಾನುಮತದಿಂದ ಮರುಆಯ್ಕೆಯಾಗಿದ್ದಾರೆ.

## ಹೊಸ ಬೆಳಕು

**ನಲ್ನುಡಿ :**

**ತನೋತು ಕ್ಷೇಮಂ ನಃ ತವ ವದನಸೌಂದರ್ಯಲಹರೀ-
ಪರೀವಾಹಸ್ರೋತಃಸರಣಿರಿವ ಸೀಮಂತಸರಣಿಃ ।
ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರ-
ದ್ವಿಷಾಂ ಬೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್ ॥**

ಅಂದರೆ ಹೆ ಭಗವತಿ! ನಿನ್ನ ಬೈತಲೆಯು ಹೇಗಿದೆಯೆಂದರೆ - ನಿನ್ನ ಮುಖ ಸೌಂದರ್ಯದ ಹೊನಲುಗಳು ಹರಿದು ಬರಲು ಮಾಡಿರುವ ದಾರಿಯಂತಿದೆ ಮತ್ತು ದಟ್ಟವಾದ ಕೇಶಪಾಶಗಳ ಕಾರ್ಗತ್ತಲೆಯೆಂಬ ಶತ್ರುಗಳಿಂದ ಸೆರೆಹಿಡಿಯಲ್ಪಟ್ಟ ಬಾಲರವಿಯ ಕಿರಣವೋ ಎಂಬಂತೆ ಕಾಣಿಸುತ್ತಿದೆ. ಅಲ್ಲದೇ ಈ ಬೈತಲೆಗೆ ಸಿಂಧೂರದಿಂದ ಅಲಂಕಾರ ಮಾಡಿದ್ದರಿಂದ ಸದಾ ಹೊಂಬಣ್ಣದಿಂದ ಶೋಭಿಸುತ್ತಿದೆ. ಇಂತಹ ನಿನ್ನ ಬೈತಲೆಯು ನಮಗೆ ಕ್ಷೇಮವನ್ನುಂಟುಮಾಡಲಿ.

**ಪುಸ್ತಕ ಪರಿಚಯ :**

**ತುಳುನಾಡಿನ ಸ್ಥಾನಿಕ ಬ್ರಾಹ್ಮಣರು**
ಲೇಖಕರು : ವಿ. ಆರ್. ಉದ್ಯಾವರ್
ಪ್ರಕಾಶಕರು : ಎಸ್. ಎಸ್. ಉದ್ಯಾವರ

ವಿ. ಆರ್. ಉದ್ಯಾವರ್ (ಉದ್ಯಾವರ ವೆಂಕಟರಾವ್) ಅವರು ತಮ್ಮ ಈ ಪುಸ್ತಕದ ಮುನ್ನುಡಿಯಲ್ಲಿ ಹೇಳುತ್ತಾರೆ - ''ನಮ್ಮಲ್ಲಿಯ ಲಾಘವ ಪ್ರಜ್ಞೆಯನ್ನು ಬಹುಮಟ್ಟಿಗೆ ಹೋಗಲಾಡಿಸಿ ನಾವು ಅಭಿಮಾನದಿಂದ ಬಾಳಿ ಬದುಕುವಂತೆ ನಮ್ಮಲ್ಲಿ ನವಚೈತನ್ಯವನ್ನು ತುಂಬಿದ ನಮ್ಮ ಪೂಜ್ಯ ಗುರುವರೇಣ್ಯರಾದ ಜಗದ್ಗುರು ಶ್ರೀ ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾ ಸನ್ನಿಧಾನಂಗಳವರನ್ನು ಪುನಃ ಪುನಃ ಸ್ಮರಿಸಿ ಅವರಿಗೆ ಸಾಷ್ಟಾಂಗ ಪ್ರಣಾಮವನ್ನು ಅರ್ಪಿಸುತ್ತಾ ಈ ನಿವೇದನೆಯನ್ನು ಸಮಾಪ್ತಗೊಳಿಸುತ್ತೇನೆ''.

ವಿ.ಆರ್.ಉದ್ಯಾವರ್ (1911-1995) ಇವರು ಮಂಗಳೂರು ಸರಕಾರೀ ಕಾಲೇಜಿನ ನಿವೃತ್ತ ಉಪನ್ಯಾಸಕರು. ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಹಾಗೂ ಶ್ರೀ ಸುಬ್ರಹ್ಮಣ್ಯ ಸಹಕಾರೀ ಬ್ಯಾಂಕ್ ನಿಯಮಿತ, ಮಂಗಳೂರು ಇವುಗಳ ಅಧ್ಯಕ್ಷರಾಗಿದ್ದರು. ಈ ಪುಸ್ತಕದ ಪ್ರಥಮ ಮುದ್ರಣ 1988. ದ್ವಿತೀಯ ಮುದ್ರಣ 2008. ಎಸ್.ಎಸ್.ಉದ್ಯಾವರ್ ಬೆಂಗಳೂರು ಇವರು ಪ್ರಕಾಶಕರು. ಮುದ್ರಣ : ರಾಜೇಶ್ ಪವರ್ ಪ್ರೆಸ್, ಪುತ್ತೂರು, ದ.ಕ.

ಈ ಪುಸ್ತಕದಲ್ಲಿ ತುಳುನಾಡಿನ ಸ್ಥಾನಿಕ ಬ್ರಾಹ್ಮಣರು, ಸ್ಥಾನಿಕರ ಹುಟ್ಟು ಹಾಗೂ ಬೆಳವಣಿಗೆ, ಇತಿಹಾಸ ಕಾಲದಲ್ಲಿ ಸ್ಥಾನಿಕರ ಬೆಳವಣಿಗೆ, ಜೈನ ಸಂಸ್ಕೃತಿ ಮತ್ತು ಸ್ಥಾನಿಕರು, ಮಧ್ವಮತ ಮತ್ತು ಸ್ಥಾನಿಕರು, ಬ್ರಿಟಿಷರ ಪ್ರಭಾವ, ಶ್ಯಾನುಭೋಗಿಕೆಯ ವಿಚಾರ ಮತ್ತು ಸ್ಥಾನಿಕರ ಸ್ಥಾನ-ಮಾನಗಳ ಬಗ್ಗೆ ಉಪಯುಕ್ತ ಮಾಹಿತಿ ಇದೆ. ಶ್ರೀ ಐ. ಕೆ. ಶ್ರೀನಿವಾಸ ರಾವ್, ಡಾ। ಎಂ. ಎಸ್. ಅಚ್ಯುತ ಶರ್ಮ ಮತ್ತು ಡಾ। ಪಾದೂರು ಗುರುರಾಜಭಟ್ಟರ ''ತುಳುನಾಡು ಮತ್ತು ಇತಿಹಾಸ'' ಇತ್ಯಾದಿ ಪುಸ್ತಕಗಳು ವಿ. ಆರ್. ಉದ್ಯಾವರ್ ಅವರ ಜಿಜ್ಞಾಸೆಗೆ ಹೆಚ್ಚಿನ ಆಸರೆ ನೀಡಿದೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ.

## ಆಟೋಟಗಳು ಸಮಾಜದ ಸಂಘಟನೆಗೆ ಸಹಕಾರಿ... (...1ನೇ ಪುಟದಿಂದ)

ಜತೆಕಾರ್ಯದರ್ಶಿ ಶ್ರೀ ಕೃಷ್ಣ ಕುಮಾರ್ ರಾವ್ ಮಟ್ಟು ಕಾರ್ಯಕ್ರಮ ಸಂಯೋಜನೆ ಮಾಡಿ ಧನ್ಯವಾದ ಸಲ್ಲಿಸಿದರು. ಶ್ರೀ ಪ್ರಭಾಕರ ಭಂಡಿಯವರು ಬಹುಮಾನಿತರ ವಿವರ ನೀಡಿದರು.

ಅಂದು ಬೆಳಿಗ್ಗೆ 9-00 ಗಂಟೆಯಿಂದಲೇ ಪ್ರಾರಂಭಿಸಬೇಕಾದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು 9-30ಕ್ಕೆ ಪ್ರಾರಂಭಗೊಂಡಿತು. ಪ್ರತಿ ವರ್ಷದಂತೆ "ಶ್ರೀ ಶಾರದಾ" ಪತ್ರಿಕೆಯಲ್ಲಿ ಈ ಬಗ್ಗೆ ಕರೆ ನೀಡಿ ಸಮಾಜದ ವಿವಿಧ ಸಂಘಟನೆಗೆ ವೈಯಕ್ತಿಕ ಪತ್ರ ಕಳುಹಿಸಿ 8-30ಕ್ಕೆ ಕ್ರೀಡಾಂಗಣದಲ್ಲಿಬೇಕೆಂದು ನಿಯಮ ವಿಧಿಸಿದ್ದರೂ ಕೇವಲ ಕೆಲವು ತಂಡಗಳು ಮಾತ್ರ ತಮ್ಮ ಉಪಸ್ಥಿತಿಯನ್ನು 8-30ಕ್ಕೆ ದಾಖಲಿಸಿಕೊಂಡಿವೆ. ಇನ್ನೂ ಕೆಲವು ತಂಡಗಳು ಬರುವ ವಿಚಾರವನ್ನು ಮುಂಚಿತವಾಗಿ ತಿಳಿಸಿಲ್ಲ. ಅಲ್ಲದೆ 9-00 ಗಂಟೆಯ ನಂತರ ಬಂದು ನಮ್ಮ ತಂಡವೂ ಆಡಲಿದೆ ಎಂದು ತಿಳಿಸಿದ್ದಾರೆ. ಇದು ಸಂಘಟಕರಿಗೆ ಅತ್ಯಂತ ಹೆಚ್ಚು ಸಂಕಷ್ಟಕ್ಕೆ ಸಿಲುಕಿದಂತಾಯಿತು. ಆದ್ದರಿಂದ ಮುಂದಿನ ದಿನಗಳಲ್ಲಿ ಆಡಲು ಬರುವ ಎಲ್ಲಾ ತಂಡಗಳೂ ಮುಂಚಿತವಾಗಿ ಸಂಘಟಕರಿಗೆ ತಿಳಿಸುವುದು ಬಹಳ ಪ್ರಾಮುಖ್ಯವೆಂದು ಅಭಿಪ್ರಾಯ ಪಡಲಾಗಿದೆ.

ಬೆಂಗಳೂರು, ಮೈಸೂರು, ಪುತ್ತೂರು, ಬೆಳ್ತಂಗಡಿ ಹಾಗೂ ಆಸುಪಾಸಿನಿಂದ ಆಗಮಿಸಿದ ಒಟ್ಟು 21 ತಂಡಗಳು ಈ ವರ್ಷ ಶ್ರೀ ಶಾರದಾ ಟ್ರೋಫಿ ಪಂದ್ಯಾಟದಲ್ಲಿ ಆಡಿದ್ದಾರೆ.

ಎಲ್ಲಾ ಆಟಗಾರರಿಗೆ ಬೆಳಗ್ಗಿನ ಉಪಾಹಾರವನ್ನು ಕ್ರೀಡಾಂಗಣದಲ್ಲಿಯೇ ವ್ಯವಸ್ಥೆ ಮಾಡಲಾಗಿತ್ತು. ತಂಡಗಳ ಸಂಖ್ಯೆ ಹೆಚ್ಚು ಇದ್ದುದರಿಂದ ಮೊದಲ 2 ರೌಂಡ್ಸ್‌ಗಳಲ್ಲಿ ಕೇವಲ 6 ಓವರ್‌ಗಳ ಪಂದ್ಯವನ್ನು ಆಡಿಸಲಾಯಿತು. ಮಧ್ಯಾಹ್ನದ ವರೆಗೆ ಸೆಮಿಫೈನಲ್ ಪಂದ್ಯಗಳು ಮಾತ್ರ ಬಾಕಿ ಉಳಿಯುವಂತೆ ಆಡಿಸಲಾಯಿತು. ಮಧ್ಯಾಹ್ನದ ಊಟಕ್ಕಾಗಿ ಎಲ್ಲರೂ ಶ್ರೀ ಶಾರದಾ ಮಂಟಪಕ್ಕೆ ತೆರಳಿ ಊಟ ಸ್ವೀಕರಿಸಿದರು.

ಮಧ್ಯಾಹ್ನದ ನಂತರ 2.30ಕ್ಕೆ ಪ್ರಾರಂಭವಾದ ಸೆಮಿಫೈನಲ್ ಪಂದ್ಯಗಳಲ್ಲಿ ಉಡುಪಿ 'ಎ' ತಂಡವನ್ನು ಉಡುಪಿ 'ಬಿ' ತಂಡವೂ, ಬೆಳ್ತಂಗಡಿ 'ಎ' ತಂಡವು ಎನ್.ಐ.ಟಿ.ಕೆ. ಸುರತ್ಕಲ್ ತಂಡವನ್ನು ಮಣಿಸಿ ಫೈನಲ್ ಹಂತಕ್ಕೇರಿದವು. ಅಂತಿಮವಾಗಿ ಫೈನಲ್ ಪಂದ್ಯದಲ್ಲಿ ಉಡುಪಿ 'ಬಿ' ತಂಡವು "ಶ್ರೀ ಶಾರದಾ ಟ್ರೋಫಿ-2009"ರ ಪ್ರಶಸ್ತಿಗೆ ಅರ್ಹತೆ ಪಡೆಯಿತು. ಉಡುಪಿಯಲ್ಲಿ ನಡೆಯುತ್ತಿರುವ

ಈ ಶಾರದಾ ಟ್ರೋಫಿ ಪಂದ್ಯಾಟವು ನಮ್ಮ ಸಮಾಜದ ಒಂದು ಅತ್ಯುತ್ತಮ ಸಂಘಟನೆಗೆ ಸಾಕ್ಷಿಯಾಗಿದೆ. ಪಂದ್ಯಾಟವನ್ನು 17 ವರ್ಷಗಳ ಹಿಂದೆ ಪ್ರಾರಂಭಿಸುವಾಗ ಕೇವಲ 4-5 ತಂಡಗಳಿಂದ ಪ್ರಾರಂಭಗೊಂಡ ಈ ಪಂದ್ಯಾಟವು ವರ್ಷದಿಂದ ವರ್ಷಕ್ಕೆ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಂಡು ಬಂದಿದೆ. ಅತ್ಯಂತ ವ್ಯವಸ್ಥಿತವಾಗಿ ನಡೆದುಕೊಂಡು ಬರುವ ಈ ಶಾರದಾ ಟ್ರೋಫಿ ಪಂದ್ಯಾಟದ ಬಗ್ಗೆ ನಮ್ಮ ಸಮಾಜದ ಬೇರೆ ಬೇರೆ ಸಂಘಟನೆಗಳ ಬೇರೆ ಬೇರೆ ಪದಾಧಿಕಾರಿಗಳು ಅತ್ಯಂತ ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದು ಸಂಘಟಕರಿಗೆ ಅತ್ಯಂತ ತೃಪ್ತಿ ತಂದಿದೆ.

ಈ ಪಂದ್ಯಾವಳಿಗಳ ಬಹುಮಾನದ ಮೊತ್ತವನ್ನು ಕಳೆದ ಹಲವು ವರ್ಷಗಳಿಂದ ನೀಡುತ್ತಾ ಬಂದಿರುವ ಶ್ರೀಮತಿ ಮತ್ತು ಶ್ರೀ ಅಲೆವೂರು ಶ್ಯಾಮರಾವ್ ದಂಪತಿಗಳು ದಿ| ಕೆ. ಭುಜಂಗ ರಾವ್ ಮತ್ತು ದಿ| ಲಕ್ಷ್ಮೀ ಅಮ್ಮ ದಂಪತಿಗಳ ಸ್ಮರಣಾರ್ಥವಾಗಿ ಈ ವರ್ಷವೂ ಬಹುಮಾನದ ಪ್ರಾಯೋಜಕ ರಾಗಿದ್ದರು ಆಗಮಿಸಿದ ಎಲ್ಲರಿಗೂ ಬೆಳಗ್ಗಿನ ಉಪಾಹಾರಕ್ಕೆ ಉಡುಪಿ ಮಣಿಪಾಲದಲ್ಲಿ ವಾಸ್ತವ್ಯದಲ್ಲಿರುವ ನಂದಳಿಕೆ ಶ್ರೀಮತಿ ಮತ್ತು ಶ್ರೀಕಾಂತ್ ರಾವ್ ಹಾಗೂ ಸಹೋದರರು ಪ್ರಾಯೋಜಕರಾಗಿದ್ದರು.

**ಜ್ಯೂನಿಯರ್ ಕ್ರಿಕೆಟರ್ಸ್**

ಜ್ಯೂನಿಯರ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಉಡುಪಿ, ಚಿತ್ರಾಪುರ ಮತ್ತು ಬೆಳ್ತಂಗಡಿ ತಂಡಗಳು ಪಾಲ್ಗೊಂಡು ಬೆಳ್ತಂಗಡಿ ತಂಡವು ವಿನ್ನರ್ ಪ್ರಶಸ್ತಿಯನ್ನೂ, ಚಿತ್ರಾಪುರ ತಂಡವು ರನ್ನರ್ ಪ್ರಶಸ್ತಿಯನ್ನೂ ಗಳಿಸಿದವು. ಶ್ರೀ ಶಾರದಾ ಪತ್ರಿಕೆಯಲ್ಲಿ ಹಿರಿಯರ ಕ್ರಿಕೆಟ್ ಪಂದ್ಯಾಟಕ್ಕಾಗಿ ಕರೆನೀಡಿದ್ದು ಉಡುಪಿಯಲ್ಲಿ ಹಿರಿಯರ ಒಂದು ತಂಡ ರಚನೆಯಾಗಿದ್ದು ಕ್ರಿಕೆಟ್ ಆಡಲು ಸಿದ್ದರಿದ್ದರು. ಆದರೆ ಬೇರೆ ಯಾವುದೇ ತಂಡ ಇಲ್ಲದೆ ಇದ್ದುದರಿಂದ ಹಿರಿಯರ ಕ್ರಿಕೆಟ್ ಪಂದ್ಯಾಟವನ್ನು ಕೈಬಿಡಲಾಯಿತು.

**ಮಹಿಳಾ ವೇದಿಕೆ ವತಿಯಿಂದ ನಡೆದ ಸ್ಪರ್ಧೆಗಳು**

ಅಂದು ಬೆಳಿಗ್ಗೆ 9-00 ಗಂಟೆಯಿಂದ ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಹಿಳಾ ವೇದಿಕೆಯ ವತಿಯಿಂದ ಮಕ್ಕಳಿಗೆ ಹಾಗೂ ಮಹಿಳೆಯರಿಗಾಗಿ ವಿವಿಧ ಒಳಾಂಗಣ ಆಟವನ್ನು ಆಯೋಜಿಸಲಾಗಿತ್ತು.


ಜ್ಯೂನಿಯರ್ ಕ್ರಿಕೆಟರ್ಸ್ ವಿನ್ನರ್ಸ್ ಬೆಳ್ತಂಗಡಿ ಇವರು ಮುಖ್ಯಅತಿಥಿಗಳಿಂದ ಟ್ರೋಫಿ ಸ್ವೀಕರಿಸುತ್ತಿರುವ ಸಂಭ್ರಮದಲ್ಲಿ

ಕು| ದೀಕ್ಷಾ, ಕು| ಮಾನಸ, ಕು| ಶಮಾತ್ಮಿಕಾರಿಂದ ಪ್ರಾರ್ಥನೆಯ ಬಳಿಕ ಮಹಿಳಾ ವೇದಿಕೆಯ ಹಿರಿಯ ಸದಸ್ಯೆ ಶ್ರೀಮತಿ ತುಳಸೀ ವಾಸುದೇವ ರಾವ್ ಜ್ಯೋತಿ ಬೆಳಗಿಸುವ ಮೂಲಕ ಒಳಾಂಗಣ ಆಟವನ್ನು ಉದ್ಘಾಟಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಗೀತಾ ಕೃಷ್ಣಕುಮಾರ್ ಎಲ್ಲರನ್ನು ಸ್ವಾಗತಿಸಿದರು.

ಶ್ರೀ ಶಾರದಾ ಮಂಟಪದಲ್ಲಿ ನಡೆದ ಈ ಒಳಾಂಗಣ ಆಟದಲ್ಲಿ ಬೇರೆ ಬೇರೆ ಊರಿನಿಂದ ಬಂದ ಸಮಾಜದ ಮಹಿಳೆಯರು ಹಾಗೂ ಮಕ್ಕಳು ಉತ್ಸಾಹದಿಂದ ಪಾಲ್ಗೊಂಡರು. ಬೆಳಗ್ಗಿನ ಉಪಾಹಾರ ಮುಗಿಸಿ ಪ್ರಾರಂಭಿಸಿದ ವಿವಿಧ ಸ್ಪರ್ಧೆಗಳು ಮಧ್ಯಾಹ್ನದವರೆಗೂ ನಡೆದವು. ಊಟದ ನಂತರ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ರಾವ್ ಉಪಸ್ಥಿತರಿದ್ದು ಸಂಘದ ಆಡಳಿತ ಮಂಡಳಿಯ ಸದಸ್ಯರಾದ ಉಡುಪಿಯ ಖ್ಯಾತ ಸರ್ಜನ್ ಡಾ| ವೈ. ಸುದರ್ಶನ್ ರಾವ್ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು. ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಗೀತಾ ಕೃಷ್ಣಕುಮಾರ್, ಸಂಘದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಹಾಲಕ್ಷ್ಮೀ ಶ್ಯಾನುಭಾಗ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ವೇಣುಗೋಪಾಲ ಕಾರ್ಯಕ್ರಮ ಸಂಯೋಜನೆ ಮಾಡಿದರು.


'ಶ್ರೀಶಾರದಾ ಟ್ರೋಫಿ-2009' ಕ್ರಿಕೆಟ್ ಪಂದ್ಯಾಟ

## ಶಾರದಾ ಟ್ರೋಫಿ ಫಲಿತಾಂಶ ವಿವರ

ವಿನ್ನರ್ಸ್ – ಉಡುಪಿ 'ಬಿ'    ರನ್ನರ್ಸ್ – ಬೆಳ್ತಂಗಡಿ 'ಎ'.

**ಸೆಮಿಫೈನಲ್ ಪ್ರವೇಶಿಸಿದ ತಂಡಗಳು :** ಉಡುಪಿ 'ಎ', ಎನ್.ಐ.ಟಿ.ಕೆ ಸುರತ್ಕಲ್

*ಬೆಸ್ಟ್ ಬ್ಯಾಟ್ಸ್‌ಮೆನ್ :* **ಕೋದಂಡರಾಮ (ಉಡುಪಿ 'ಬಿ')**

*ಬೆಸ್ಟ್ ಬೌಲರ್ :* **ದೀಕ್ಷಿತ್ (ಎನ್.ಐ.ಟಿ.ಕೆ ಸುರತ್ಕಲ್)**

*ಆಲ್‌ರೌಂಡರ್ :* **ಮನೋಜ್ (ಬೆಳ್ತಂಗಡಿ 'ಎ')**

**ಜ್ಯೂನಿಯರ್ ಕ್ರಿಕೆಟರ್ಸ್** : ವಿನ್ನರ್ಸ್ – **ಬೆಳ್ತಂಗಡಿ**, ರನ್ನರ್ಸ್ – **ಚಿತ್ರಾಪುರ**

### ಮಹಿಳಾ ವಿಭಾಗದಿಂದ ನಡೆದ ಒಳಾಂಗಣ ಕ್ರೀಡಾ ಸ್ಪರ್ಧೆಯ ಬಹುಮಾನಿತರು

**1ನೇ ತರಗತಿ ಒಳಗಿನ ಮಕ್ಕಳಿಗೆ**

**ಚಾಕ್‌ಲೇಟ್ ಹೆಕ್ಕುವುದು** : ಪ್ರಥಮ–ಪಲ್ಲವಿ ಗಣೇಶ್ ಮಣಿಪಾಲ
ದ್ವಿತೀಯ–ಯಜ್ಞವಲ್ಕ್ಯ ಅಂಬಲಪಾಡಿ, ಅನೀಶ್ ರಾವ್ ಪಕ್ಷಿಕೆರೆ

**1 ರಿಂದ 3ನೇ ತರಗತಿವರೆಗಿನ ಮಕ್ಕಳಿಗೆ**

ಎ. ಒಂಟಿಕಾಲಿನ ಓಟ : ಪ್ರಥಮ–ಅಮೃತ ಕುಮಾರ್
ದ್ವಿತೀಯ–ಸ್ವಾತಿ ರಾವ್, ಹಿರಿಯಡ್ಕ

ಬಿ. ಕೆರೆ ದಡ : ಪ್ರಥಮ–ಸ್ವಾತಿ ರಾವ್, ಹಿರಿಯಡ್ಕ
ದ್ವಿತೀಯ–ಸಿಂಚನ ರಾವ್, ಹಿರಿಯಡ್ಕ

**4 ರಿಂದ 6ನೇ ತರಗತಿವರೆಗಿನ ಮಕ್ಕಳಿಗೆ**

ಎ. ಬಕೇಟಿಗೆ ರಿಂಗ್ ಎಸೆಯುವುದು : ಪ್ರಥಮ–ಶ್ರವಣ ಕುಮಾರ್, ಹಿರಿಯಡ್ಕ
ದ್ವಿತೀಯ–ವೈಷ್ಣವಿ ಹೆಬ್ಬಾರ್

ಬಿ. ಧಾನ್ಯ ಹೆಕ್ಕುವುದು : ಪ್ರಥಮ–ಶ್ರವಣ ಕುಮಾರ್, ಹಿರಿಯಡ್ಕ
ದ್ವಿತೀಯ–ಪ್ರಿಯಾ ರಾವ್

**7 ರಿಂದ 10ನೇ ತರಗತಿವರೆಗಿನ ಮಕ್ಕಳಿಗೆ**

ಎ. ಸ್ಟಿಕ್ಕರ್ ಅಂಟಿಸುವುದು: ಪ್ರಥಮ–ವೈ. ದೀಕ್ಷಾ ರಾವ್, ದ್ವಿತೀಯ–ಕಾವ್ಯ ಯು. ರಾವ್

ಬಿ. ತಪ್ಪಿಲ್ಲದೆ ವೇಗವಾಗಿ ಬರೆಯುವುದು : ಪ್ರಥಮ–ಯೋಗೀಶ ಹೆಬ್ಬಾರ್
ದ್ವಿತೀಯ–ಶ್ವೇತ ನೀಲಾವರ

**5. ಮಹಿಳೆಯರಿಗಾಗಿ**

ಎ. ಮಡಿಕೆ ಒಡೆಯುವುದು: ಪ್ರಥಮ–ಶ್ರೀಮತಿ ಮಹಾಲಕ್ಷ್ಮೀ ಎನ್.ಶ್ಯಾನುಭಾಗ್
ದ್ವಿತೀಯ–ಶ್ರೀಮತಿ ವಾಣಿ ರವಿ ಭಂಡಿ

ಬಿ. ಸಂಗೀತ ಕುರ್ಚಿ : ಪ್ರಥಮ–ಶ್ರೀಮತಿ ಜ್ಞಾನೇಶ್ವರಿ, ದ್ವಿತೀಯ–ಶ್ರೀಮತಿ ಕುಮುದಾ

# ನಂದಿಕೂರು ಸಂಜೀವರಾಯರಿಗೆ ಸನ್ಮಾನ



ತಾ.28-12-2008ರಂದು ಶ್ರೀ ರಾಮ ದೇವಸ್ಥಾನ, ನಂದಿಕೂರು ಇಲ್ಲಿ ನಡೆದ ಭಾಗವತ ಸಪ್ತಾಹದಲ್ಲಿ ಸಾಮಾಜಿಕ ಸೇವೆಯನ್ನು ಗುರುತಿಸಿ ನಂದಿಕೂರು ಸಂಜೀವರಾಯರನ್ನು ಸನ್ಮಾನಿಸಲಾಯಿತು. ತಾ.28-01-2009ರಂದು ಪಡುಬಿದ್ರಿ ಶಾಲಾ ಮೈದಾನದಲ್ಲಿ ಜರಗಿದ ಪಡುಬಿದ್ರಿ ವ್ಯವಸಾಯ ಬ್ಯಾಂಕಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಂದಿಕೂರಿನ ಅತ್ಯುತ್ತಮ ಕೃಷಿಕ ಎಂಬ ಬಿರುದನ್ನು ನೀಡಿ ಇವರನ್ನು ಸನ್ಮಾನಿಸಲಾಯಿತು.

# ಶ್ರೀ ಎ.ವಿ. ಶ್ಯಾನುಭಾಗ್ ಇವರ ಸಹಸ್ರಚಂದ್ರ–ದರ್ಶನ ಹಾಗೂ 60ನೆಯ ವಿವಾಹ ವಾರ್ಷಿಕ ಕಾರ್ಯಕ್ರಮ



ಕಾಸರಗೋಡಿನ ಪ್ರಸಿದ್ಧ ನ್ಯಾಯವಾದಿ, ಸಮಾಜ ಸೇವಕ ಹಾಗೂ ಶಿವಬ್ರಾಹ್ಮಣ ಸಭಾದ ಅಧ್ಯಕ್ಷ ಶ್ರೀ ಎ.ವಿ. ಶ್ಯಾನುಭಾಗ್ ಅವರ ಸಹಸ್ರಚಂದ್ರ – ದರ್ಶನ ಹಾಗೂ 60ನೆಯ ವಿವಾಹ ವಾರ್ಷಿಕ ಕಾರ್ಯಕ್ರಮ ಅವರ ಸ್ವಗೃಹ ಕೃಷ್ಣ ಮಂದಿರ, ತಾಳಿಪಡ್ಪು, ಕಾಸರಗೋಡು ಇಲ್ಲಿ ತಾ.29–12–2008ರಂದು ಬಹಳ ವಿಜೃಂಭಣೆಯಿಂದ ಆಚರಿಸಲಾಯ್ತು. ಈ ಸಂದರ್ಭದಲ್ಲಿ ನಮ್ಮ ಸಮಾಜ ಬಾಂಧವರಾದ ಶ್ರೀ ಮುರಳೀಧರ್ ಹಾಗೂ ರಾಧಾ ಮುರಳೀಧರ್, ಕಾಸರಗೋಡು ಇವರ ನೇತೃತ್ವದಲ್ಲಿ ಕಾರ್ಯಕ್ರಮ ನಿರ್ವಹಿಸುವ 'ವಿಜಯಾ ಸಂಗೀತ ಪ್ರತಿಷ್ಠಾನ' ತಾಳಿಪಡ್ಪು, ಕಾಸರಗೋಡು ಇದರ ಆಶ್ರಯದಲ್ಲಿ ಶ್ರೀ ಎ. ವಿ. ಶ್ಯಾನುಭಾಗ್ ಹಾಗೂ ಸುಗಂಧಿ ಶ್ಯಾನುಭಾಗ್ ಇವರಿಗೆ ಸನ್ಮಾನ ಪತ್ರವನ್ನು ನೀಡಿ ಶಾಲು ಹೊದಿಸಿ ಫಲಪುಷ್ಪಗಳೊಂದಿಗೆ ಸನ್ಮಾನಿಸಲಾಯಿತು. ಬ್ರಹ್ಮಶ್ರೀ ವಿಷ್ಣು ಅಸ್ರ, ಉಳಿಯ ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅತಿಥಿಗಳಾದ ಶ್ರೀ ಎಸ್. ವಿ. ಭಟ್, ಅಧ್ಯಕ್ಷರು ಕ.ಸಾ.ಪ. ಕೇರಳ ಘಟಕ, ಶ್ರೀ ನಾಗೇಂದ್ರ ಭಟ್ ಕೂಡ್ಲು, ಶ್ರೀಮತಿ ಜಯಲಕ್ಷ್ಮಿ ಕಾರಂತ್ ಮಂಗಲ್ಪಾಡಿ ಮಾತನಾಡಿ ಶ್ರೀ ಎ. ವಿ. ಶ್ಯಾನುಭಾಗ್ ದಂಪತಿಗಳಿಗೆ ಎಲ್ಲಾ ವಿಧದ ಶ್ರೇಯಸ್ಸನ್ನು ಕೋರಿದರು. ಅದೇ ರೀತಿ ಇಂತಹ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಿರಿಯರನ್ನು ಸನ್ಮಾನಿಸಿ ಕಿರಿಯ ಹಾಡುಗಾರರಿಗೆ ವೇದಿಕೆಯನ್ನು ಕಲ್ಪಿಸುವಂತಹ ಕಾರ್ಯಕ್ರಮವನ್ನು ಮಾಡುತ್ತಾ ಬರುತ್ತಿರುವ ವಿಜಯ ಸಂಗೀತ ಪ್ರತಿಷ್ಠಾನದ ಭಾರವಾಹಿಗಳನ್ನು ಅಭಿನಂದಿಸಿದರು.

ವಿಜಯಾ ಸಂಗೀತ ಪ್ರತಿಷ್ಠಾನ ನಡೆಸುವ ಋತುಗಾನ ಹೇಮಂತಗಾನ ಕಾರ್ಯಕ್ರಮ ದಂಗವಾಗಿ ಶ್ರೀಮತಿ ಶ್ವೇತ ನಾಗೇಶ್ ಚೈನ್ನೈಯವರು ತಮ್ಮ ಸುಶ್ರಾವ್ಯ ಕಂಠದಿಂದ ಕನ್ನಡ ಭಾವಗೀತೆಯನ್ನು ಸಾದರಪಡಿಸಿ ಜನಮನ್ನಣೆಗೆ ಪಾತ್ರರಾದರು. ಇದೇ ಸಂದರ್ಭದಲ್ಲಿ ಶ್ರೀಮತಿ ಸುಧಾಮೂರ್ತಿ ಚಳ್ಳಕೆರೆ, ಕುಮಾರಿ ಇಂಚರ ಹಾಗೂ ಕೆ. ಜಿ. ಶ್ಯಾನುಭಾಗ್ ಹಾಡಿ ರಂಜಿಸಿದರು. ಶ್ರೀ ಸುಕುಮಾರ ಆಲಂಪಾಡಿಯವರು ಸಮಯೋಚಿತವಾಗಿ ಮಾತನಾಡಿ ಅತಿಥಿ ಅಭ್ಯಾಗತರನ್ನು ಸ್ವಾಗತಿಸಿದರು.

ಶ್ರೀ ವಿಷ್ಣುಮೂರ್ತಿ ಚಳ್ಳಕೆರೆಯವರು ತಮ್ಮದೇ ಆದ ಶೈಲಿಯಲ್ಲಿ ಕಾರ್ಯಕ್ರಮವನ್ನು ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಕಾಸರಗೋಡಿನ ಶಿವಬ್ರಾಹ್ಮಣ ಸಭಾ, ಮಂಗಳೂರಿನ ಸುಬ್ರಹ್ಮಣ್ಯ ಸಭಾ ಇದರ ಕಾರ್ಯಕರ್ತರು, ಶ್ರೀ ಶುಭಕರ ಶ್ಯಾನುಭಾಗ್, ಶ್ರೀ ಮ.ನಾ. ಹೆಬ್ಬಾರ್, ಶ್ರೀ ವಿಷ್ಣು ಶ್ಯಾನುಭಾಗ್ ಎರ್ರೆಪಾಡಿ , ಶ್ರೀ ಸುದರ್ಶನ ಶ್ಯಾನುಭಾಗ್ ಕೂಡ್ಲು, ಶ್ರೀ ಎಸ್.ವಿ. ಭಟ್, ಕ.ಸಾ.ಪ. ಅಧ್ಯಕ್ಷರು, ಕೇರಳ ಘಟಕ ಮುಂತಾದವರು ಶ್ರೀ ಎ. ವಿ. ಶ್ಯಾನುಭಾಗ್ ದಂಪತಿಗಳನ್ನು ಸನ್ಮಾನಿಸಿ ಶುಭ ಹಾರೈಸಿದರು.

ವರದಿ : **ರಾಧಾಮುರಳೀಧರ್, ಕಾಸರಗೋಡು**

# ಸ್ಥಾನಿಕ ಬ್ರಾಹ್ಮಣ ಯುವ ಸಮಾವೇಶ-ದಶಮಾನೋತ್ಸವ



ಸ್ಥಾನಿಕ ಬ್ರಾಹ್ಮಣ ಯುವ ಬಾಂಧವರ ಹತ್ತನೇ ವರ್ಷದ ಯುವ ಸಮಾವೇಶ ಸುಬ್ರಹ್ಮಣ್ಯ ಸಭಾದಲ್ಲಿ ಫೆ.1ರಂದು ನಡೆಯಿತು. ಪ್ರತಿ ವರ್ಷದಂತೆ ವಿವಿಧ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಗಳೊಂದಿಗೆ ನಡೆದ ಸಮಾವೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ಸ್ಥಾನಿಕ ಬ್ರಾಹ್ಮಣ ಯುವಕ-ಯುವತಿಯರು ಪಾಲ್ಗೊಂಡಿದ್ದರು.


ಸಮಾರಂಭದ ದಿನ ಬೆಳಗ್ಗೆ 9-30ಕ್ಕೆ ಕಳೆದ ಸಾಲಿನ ಪದಾಧಿಕಾರಿಗಳಿಂದ ಪ್ರಸಕ್ತ ಸಾಲಿನ ಪದಾಧಿಕಾರಿಗಳು ಶಿವನಮೂರ್ತಿಯನ್ನು ಪಡೆಯುವುದರರೊಂದಿಗೆ ಸಮಾವೇಶ ವಿದ್ಯುಕ್ತವಾಗಿ ಉದ್ಘಾಟನೆಗೊಂಡಿತು.

ಆ ಬಳಿಕ ವಿವಿಧ ವಿಭಾಗಗಳಿಗೆ ಸಂಗೀತ ಸ್ಪರ್ಧೆ, ಛದ್ಮವೇಷ, ರಂಗೋಲಿ, ಚಿತ್ರಕಲಾ ಸ್ಪರ್ಧೆಗಳು ನಡೆದವು. ಪುಟಾಣಿಗಳಿಗಾಗಿ 'ಬೇಬಿ ಶೋ' ಆಯೋಜಿಸಲಾಗಿತ್ತು. ಇದರ ತೀರ್ಪುಗಾರರಾಗಿ ಡಾ। ಸಂದೀಪ್ ಮುಲ್ಕಿ ಮತ್ತು ಶ್ರೀಮತಿ ಶ್ಯಾಮಲಾ ರಘುನಾಥ್ ರಾವ್ ಸಹಕರಿಸಿದರು. ಮಧ್ಯಾಹ್ನ ಶ್ರೀ ಬಾಲಕೃಷ್ಣ ರಾವ್ ಕನ್ಯಾನ ಇವರು 'ರಾಜಕೀಯದಲ್ಲಿ ಬ್ರಾಹ್ಮಣರ ಪಾತ್ರ' ಈ ವಿಷಯದ ಕುರಿತು ಚಿಂತನ-ಮಂಥನ ನಡೆಸಿಕೊಟ್ಟರು. ಆ ಬಳಿಕ ಆಗಮಿಸಿದ ಸಮಾಜ ಬಾಂಧವರು ಊಟದಲ್ಲಿ ಭಾಗಿಯಾದರು. ಮಧ್ಯಾಹ್ನದ ಬಳಿಕ ನೃತ್ಯಸ್ಪರ್ಧೆ, ಪಿಕ್ ಆ್ಯಂಡ್ ಆಕ್ಟ್ ಸ್ಪರ್ಧೆ ನಡೆಯಿತು. ಎಲ್ಲಾ ಸ್ಪರ್ಧೆಗಳ ತೀರ್ಪುಗಾರರಾಗಿ ಶ್ರೀಮತಿ ಅಕ್ಷತಾ ಮನೀಶ್, ಶ್ರೀಮತಿ ಹರ್ಷಿತಾ ಸಂದೀಪ್, ಶ್ರೀಮತಿ ಮತ್ತು ಶ್ರೀ ಪ್ರತಿಭಾ ಪ್ರಭಾಕರ್ ಭಂಡಿ, ಶ್ರೀಮತಿ ಅರುಣಾ ಸೋಮಶೇಖರ್, ಶ್ರೀಮತಿ ಕುಸುಮಾ ಮುಂತಾದವರು ಸಹಕರಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಡಾ। ಬಿ. ಎಚ್. ಆನಂದ್ ರಾವ್ (ಮುಖ್ಯಸ್ಥರು-ಸರ್ಜರಿ ವಿಭಾಗ, ಕೆ.ಎಂ.ಸಿ. ಮಣಿಪಾಲ) ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಜೇಂದ್ರ ಪೆರ್ಲ, ಶ್ರೀ ಶಿವಪ್ರಸಾದ್ ಕೇದಿಗೆ, ಮಹಾಪ್ರಾಯೋಜಕರುಗಳಾದ ಶ್ರೀ ಕೇದಿಗೆ ಹರ್ಷಕುಮಾರ್, ಶ್ರೀ ಎಮ್. ಎಸ್. ರಘುನಾಥ್‌ರಾವ್ ಉಪಸ್ಥಿತರಿದ್ದರು. ವೇದಿಕೆಯಲ್ಲಿ ಪ್ರಸಕ್ತ ಸಾಲಿನ ಅಧ್ಯಕ್ಷ ನಿಕ್ಷೇಪ್ ಕೇದಿಗೆ, ಉಪಾಧ್ಯಕ್ಷರುಗಳಾದ ರಜಿತ್‌ರಾವ್, ಪ್ರೀತಿಕಾ ಹರ್ಷಕುಮಾರ್, ಕಾರ್ಯದರ್ಶಿ ನವನೀತ್, ಜೊತೆ ಕಾರ್ಯದರ್ಶಿಗಳಾದ ಹರಿಪ್ರಸಾದ್ ಬೆಟ್ಟಂಪಾಡಿ, ಕು। ಮಾನಸಾ ಹೆಬ್ಬಾರ್, ಖಜಾಂಚಿ ನಟೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಡಾ। ಬಿ. ಎಚ್. ಆನಂದ್‌ರಾವ್ ಮಾತನಾಡಿ ಪ್ರತಿಯೊಂದು ಸಂಘ ಸಂಸ್ಥೆಗಳಲ್ಲಿ ಯುವಕರ ಪಾತ್ರ ಬಹಳ ಮುಖ್ಯ. ಹಿರಿಯರ ಸಲಹೆಗೆ, ಕಿರಿಯರು ಕ್ರಿಯಾಶೀಲರಾಗಿ ದುಡಿದರೆ ಕಾರ್ಯಕ್ರಮ ಯಶಸ್ವಿಯಾಗುವುದೆಂದು ತಿಳಿಸಿದರು. ಅಧ್ಯಕ್ಷ ನಿಕ್ಷೇಪ್ ಕ್ಯಾದಿಗೆ ಸ್ವಾಗತಿಸಿದರೆ, ಕಾರ್ಯದರ್ಶಿ ನವನೀತ್ ವಂದಿಸಿದರು. ಭರತ್ ಪಾವಂಜೆ, ನವೀನ್ ಕಾರ್ಯಕ್ರಮ ನಿರೂಪಿಸಿದರು. ಜನಗಣಮನದೊಂದಿಗೆ ಸಮಾವೇಶ ಸಂಪನ್ನಗೊಂಡಿತು.

ವರದಿ : **ವರ್ಕಾಡಿ ನಾಗರಾಜ್**

# ಉಡುಪಿ ಬೈಲೂರಿನಲ್ಲಿ ಅಡೂರು ಶ್ರೀಧರ ರಾಯರಿಗೆ ಸನ್ಮಾನ



ಉಡುಪಿ ಬೈಲೂರು ಮಹಿಷಮರ್ದಿನಿ ಯಕ್ಷಗಾನ ಮಂಡಳಿಯ ರಜತ ಸಂಭ್ರಮದ ಅಂಗವಾಗಿ ಉಭಯ ಜಿಲ್ಲೆಗಳ ತೆಂಕು ಮತ್ತು ಬಡಗುತಿಟ್ಟು ಹವ್ಯಾಸಿ ಯಕ್ಷಗಾನ ಮಂಡಳಿಗಳ ಸಮಾವೇಶವು ನೆರವೇರಿತು. ಈ ಸಮಾವೇಶದಲ್ಲಿ ಪ್ರಸಾಧನ ತಜ್ಞ, ವೇಷಧಾರಿ, ಅಡೂರು ಶ್ರೀಧರ ರಾವ್ ಅವರು ಮಹಿಷಾಸುರನ ಕೀರಿಟವನ್ನು ಹೊತ್ತು ಪ್ರಾತ್ಯಕ್ಷಿಕೆ ನೀಡಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಹೊರನಾಡು ಕ್ಷೇತ್ರದ ಧರ್ಮದರ್ಶಿ ಶ್ರೀ ಭೀಮೇಶ್ವರ ಜೋಶಿ, ಉಡುಪಿ ಶಾಸಕ ಶ್ರೀ ರಘುಪತಿ ಭಟ್, ಜಾನಪದ ವಿದ್ವಾಂಸ ಕೆ.ಎಲ್. ಕುಂಡಂತಾಯ ಮೊದಲಾದವರ ಉಪಸ್ಥಿತಿಯಲ್ಲಿ ಕಲಾವಿದ ಅಡೂರು ಶ್ರೀಧರ ರಾಯರನ್ನು ಶಾಲು, ಫಲಪುಷ್ಪ , ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಯಿತು.

# ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ 2ನೇ ಹಂತದ ತರಬೇತಿ ಶಿಬಿರ ಮತ್ತು ಶ್ರೀ ರಾಘವೇಂದ್ರ ರಾಯರಿಗೆ ಸನ್ಮಾನ





ಸಂಘದ ಶಿಕ್ಷಣ ಮತ್ತು ತರಬೇತಿ ವೇದಿಕೆಯು ನಡೆಸುತ್ತಿರುವ ಈ ವರ್ಷದ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ದ್ವಿತೀಯ ಹಾಗೂ ಕೊನೆಯ ಹಂತದ ಶಿಬಿರವು ಜನವರಿ 18 ರವಿವಾರದಂದು ಯಶಸ್ವಿಯಾಗಿ ನಡೆಯಿತು.

ಇದೇ ಸಂದರ್ಭದಲ್ಲಿ, ಶ್ರೀ ಶಾರದಾ ಮಂಟಪ ಸಮುಚ್ಚಯದ ಎಲ್ಲಾ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಪ್ರಾರಂಭದಿಂದಲೂ ಇಂಜಿನಿಯರ್ ಆಗಿ ನಮ್ಮೊಂದಿಗೆ ಪ್ರಾಮಾಣಿಕವಾಗಿ ಸಹಕಾರ ನೀಡುತ್ತಿರುವ ಶ್ರೀ ಯು. ಕೆ. ರಾಘವೇಂದ್ರರಾಯರನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ಅವರು ಶ್ರೀ ರಾಘವೇಂದ್ರರಾಯರ ದಕ್ಷ ಸೇವೆ ಹಾಗೂ ಸಹಕಾರಗಳನ್ನೂ ಸ್ಮರಿಸಿ, ಶಾಲು, ಫಲ, ಪುಷ್ಪ, ಕಾಣಿಕೆಗಳನ್ನು ನೀಡಿ ಸನ್ಮಾನಿಸಿದರು ಮತ್ತು ಶಿಕ್ಷಣ ತರಬೇತಿ ವೇದಿಕೆ ನಡೆಸುತ್ತಿರುವ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ವಿದ್ಯಾರ್ಥಿಗಳಿಗೆ ಶುಭಾಶಯ ಹೇಳಿದರು.

ಸನ್ಮಾನಕ್ಕೆ ಉತ್ತರವಾಗಿ ಶ್ರೀ ಯು.ಕೆ. ರಾಘವೇಂದ್ರರಾಯರು ಶ್ರೀ ಶಾರದಾ ಮಂಟಪ ಮತ್ತು ಸಂಘದ ಸ್ಥಾಪನೆಗೆ ಕಾರಣರಾದ ನಮ್ಮ ಹಿರಿಯರ ಕಾರ್ಯ, ದೂರದರ್ಶಿತ್ವವನ್ನು ನೆನೆಪಿಸಿ, ನಮ್ಮ ಸಂಘವು ನಡೆಸುತ್ತಿರುವ ರಚನಾತ್ಮಕ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಕಾರ್ಯಕ್ರಮದಲ್ಲಿ ಹಾಜರಾದ ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಿದರು. ವೇದಿಕೆಯ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ ರಾವ್ ಉಪಸ್ಥಿತರಿದ್ದರು. ಸಂಘದ ಕಾರ್ಯದರ್ಶಿ ಶ್ರೀ ವೇಣುಗೋಪಾಲ ರಾವ್ ವಂದಿಸಿದರು. ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಕಾರ್ಯಕ್ರಮ ನಿರ್ವಹಿಸಿದರು.

ಶಿಕ್ಷಣ ವೇದಿಕೆಯ ಕಾರ್ಯಕ್ರಮದ ಅಂಗವಾಗಿ ಶ್ರೀ ಪ್ರಭಾಕರ ಭಂಡಿ, ಜೀವಶಾಸ್ತ್ರದ ಕುರಿತು ಹೆಚ್ಚು ಪರಿಣಾಮಕಾರಿಯಾಗಿ ಮಾಹಿತಿ ನೀಡಿದರು. ಬಳಿಕ ವೇದಿಕೆಯ ಸದಸ್ಯ ಶ್ರೀ ಹೆರ್ಗ ನಿರಂಜನ ರಾವ್ ವಿದ್ಯಾರ್ಥಿಗಳಿಗೆ ಗಣಿತ ವಿಷಯದ ಕುರಿತು ಉದಾಹರಣೆ ಸಹಿತ ಮನದಟ್ಟಾಗುವಂತೆ ತಿಳಿಸಿದರು. ಕೊನೆಯ ಗೋಷ್ಠಿಯಲ್ಲಿ ಮಣಿಪಾಲ ಪ.ಪೂ. ಕಾಲೇಜಿನ ಶ್ರೀ ನಾಗೇಂದ್ರ ಪೈ ಭೌತಶಾಸ್ತ್ರದ ವಿವಿಧ ಅಧ್ಯಾಯಗಳ ಬಗ್ಗೆ ಆಳವಾಗಿ ಚರ್ಚಿಸಿ, ಉಪಯುಕ್ತ ಪ್ರಶ್ನೆಗಳನ್ನು ಬಿಡಿಸಿ ಸೂಕ್ತ ಮಾರ್ಗದರ್ಶನ ನೀಡಿದರು.

ಶಿಬಿರದ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ಶಾರದಾ ಪತ್ರಿಕೆಯ ಮುಖ್ಯ ಸಂಪಾದಕರಾದ ಶ್ರೀ ವೈ. ಮೋಹನ ರಾವ್ ಅವರು ತಮ್ಮ ಸಮಾರೋಪ ಭಾಷಣದಲ್ಲಿ ಶಿಕ್ಷಣ ಮತ್ತು ತರಬೇತಿ ವೇದಿಕೆಯು ನಡೆಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ನಮ್ಮ ಸಮಾಜದ ವಿದ್ಯಾರ್ಥಿಗಳು ಇದರ ಸಂಪೂರ್ಣ ಪ್ರಯೋಜನ ಪಡೆದು ಅತ್ಯುನ್ನತ ಸ್ಥಾನಗಳಿಸುವಂತೆ ಕರೆನೀಡಿದರು. ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ ರಾವ್ ಸ್ವಾಗತಿಸಿದರು. ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ನಾಗೇಂದ್ರ ಪೈ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಿಂದಲೂ ವಿದ್ಯಾರ್ಥಿಗಳು ಆಗಮಿಸಿ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು. ಮೆನೇಜರ್ ಶ್ರೀ ಅಜಿತ್ ರಾವ್ ಊಟೋಪಚಾರ ವ್ಯವಸ್ಥೆಯಲ್ಲಿ ಸಹಕರಿಸಿದರು.

ವರದಿ : **ಡಾ। ರವೀಂದ್ರನಾಥರಾವ**

## ಧಾರೇಶ್ವರ್ ಸ್ಮರಣೆಯಲ್ಲಿ ವೈದ್ಯಕೀಯ ನಿಧಿಗೆ ದೇಣಿಗೆ

ಇತ್ತೀಚೆಗೆ ದೈವಾಧೀನರಾದ ಮಧುಕರ ಧಾರೇಶ್ವರರ ಸ್ಮರಣಾರ್ಥ ಅವರ ಪತ್ನಿ ಶ್ರೀಮತಿ ಲತಾ ಧಾರೇಶ್ವರ ಅವರು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ 'ವೈದ್ಯಕೀಯ ನೆರವು ನಿಧಿ'ಗೆ ರೂ.25,000 ದೇಣಿಗೆ ನೀಡಿದ್ದಾರೆ. ಈ ದೇಣಿಗೆಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ದಿ। ಮಧುಕರ ಧಾರೇಶ್ವರರ ಆತ್ಮಕ್ಕೆ ಚಿರಶಾಂತಿಯನ್ನು ನೀಡುವಂತೆ ಶಾರದಾಮಾತೆಯಲ್ಲಿ ಪ್ರಾರ್ಥಿಸುತ್ತೇವೆ. ಅಲ್ಲದೇ ಧಾರೇಶ್ವರ ಕುಟುಂಬಕ್ಕೆ ಉತ್ತರೋತ್ತರ ಅಭಿವೃದ್ಧಿಯನ್ನು ಶ್ರೀ ದೇವಿಯು ಕರುಣಿಸಲಿ ಎಂದು ಹಾರೈಸುತ್ತೇವೆ.

## ಶ್ರೀ ಸಿ. ಎಸ್. ರಾಯರಿಂದ ಸಂಘಕ್ಕೆ ಕಛೇರಿ ಪೀಠೋಪಕರಣ ಕೊಡುಗೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಅಧ್ಯಕ್ಷರಾದ ಶ್ರೀ ಸಿ. ಎಸ್.ರಾಯರು ಸಂಘಕ್ಕೆ ರೂ.20,000/- ಮೌಲ್ಯದ ಕಛೇರಿ ಪೀಠೋಪಕರಣಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ. ಈ ಸೌಜನ್ಯಕ್ಕಾಗಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಶ್ರೀ ಸಿ. ಎಸ್.ರಾಯರಿಗೆ ಹಾರ್ದಿಕವಾದ ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ಪಂಜುರ್ಲಿ ದೈವದ ಪುನಃ ಪ್ರತಿಷ್ಠೆ ಮತ್ತು ಕೋಲ






ಚಿತ್ರಗಳು : **ವಸಂತರಾವ್ ಕೇದಿಗೆ**

**ತಾ.14, 15 ಮತ್ತು 16ನೇ ಜನವರಿ 2009ರಂದು ಕೇದಿಗೆ ಭಾಸ್ಕರ್‌ರಾವ್ ಮತ್ತು ಮಕ್ಕಳಿಂದ, ಪೂಜ್ಯ ಶ್ರೀ ಎಂ. ಡಿ. ವಿ. ಭಂಡಾರ್‌ಕರ್ (ಲಕ್ಷ್ಮೀನರಸಿಂಹ ಆರಾಧಕರು, ಮೂರೂರು) ಇವರ ನಿರ್ದೇಶನದಂತೆ, ಬ್ರಹ್ಮಶ್ರೀ ತಂತ್ರಿ ಶ್ರೀಚಕ್ರ ಆರಾಧಕ ಗಣಾಧಿರಾಜ ಉಪಾಧ್ಯಾಯ ಇವರ ನೇತೃತ್ವದಲ್ಲಿ, ಕೇದಿಗೆ ಶ್ರೀ ಪಂಜುರ್ಲಿ ದೈವದ ಪುನಃ ಪ್ರತಿಷ್ಠೆ ಮತ್ತು ಕೋಲವು (ಭೂತನರ್ತನ) ವಿಜೃಂಭಣೆಯಿಂದ ನೆರವೇರಿತು. 3 ದಿನಗಳ ದೈವಿಕ ಕಾರ್ಯಕ್ರಮಗಳು ಊರಜನರ ಸಹಕಾರದೊಂದಿಗೆ ನಿರ್ವಿಘ್ನವಾಗಿ ನಡೆದು, ಅನ್ನಸಂತರ್ಪಣೆಯೂ ಜರಗಿತು.**

## ಅಪೂರ್ವ ಸಾಧಕ ಚಿ। ತಿಲಕ



ಶ್ರೀ ಮೋಹನ್‌ರಾವ್ ಹಾಗೂ ಶ್ರೀಮತಿ ಜಯಲಕ್ಷ್ಮಿಯವರ ಮಗನಾಗಿ ಚಿ। ತಿಲಕ್ 1986 ಡಿಸೆಂಬರ್ 6ರಂದು ತಿಲಕ್ ದಾಂಡೇಲಿಯಲ್ಲಿ ಜನಿಸಿದರು.

ನಾಲ್ಕನೇ ತರಗತಿಯವರೆಗೆ ದಾಂಡೇಲಿ ರೋಟರಿ ಶಾಲೆಯಲ್ಲಿ ಶಿಕ್ಷಣ ಪಡೆದು 10ನೇ ವಯಸ್ಸಿಗೆ ಹರಿಹರಪುರದ ಪ್ರಬೋಧಿನೀ ಗುರಕುಲಕ್ಕೆ ಸ್ವ-ಆಸಕ್ತಿ ಹಾಗೂ ಮಾತಾಪಿತೃಗಳ ಆಶೀರ್ವಾದದೊಂದಿಗೆ ಗುರುಕುಲ ಶಿಕ್ಷಣಕ್ಕಾಗಿ ಸೇರ್ಪಡೆಗೊಂಡರು.

**ಸಾಧನೆಗಳು :**

ವರ್ಷಕ್ಕೊಮ್ಮೆ ಮಾತ್ರ ಮನೆಗೆ ಬರುವ ಅವಕಾಶದೊಂದಿಗೆ ಆರು ವರ್ಷದ ಗುರುಕುಲ ಶಿಕ್ಷಣದಲ್ಲಿ ಶ್ರದ್ಧಾ, ಧೀಯೊಂದಿಗೆ ಯಶದ ಮುನ್ನಡೆ. ಗುರುಕುಲದ ವಿಶ್ವಾಸ ಸಂಪಾದನೆಯೊಂದಿಗೆ ಮುಂದಿನ ಶಿಕ್ಷಣಕ್ಕಾಗಿ ಬೆಂಗಳೂರು ಚೆನ್ನೇನಹಳ್ಳಿಯ ವೇದ ವಿಜ್ಞಾನ ಗುರುಕುಲಕ್ಕೆ ಸೇರ್ಪಡೆ.

ವೇದ ವಿಜ್ಞಾನ ಗುರುಕುಲದಲ್ಲಿ ಮಹೋಪಾಧ್ಯಾಯ ಶ್ರೀ ಕೋಟೆಮನೆ ರಾಮಚಂದ್ರಭಟ್ ಅವರಿಂದ ಕೃಷ್ಣ ಯಜುರ್ವೇದ ಅಧ್ಯಯನ. ಪ್ರಸ್ಥಾನತ್ರಯದ ಹಾಗೂ ಅದ್ವೈತ ವೇದಾಂತದ ಅಭ್ಯಾಸ. ಜೊತೆ ಜೊತೆಗೆ ಲೌಕಿಕ ಶಿಕ್ಷಣದಲ್ಲಿ ಎನ್‌ಓಎಸ್. ಪರೀಕ್ಷಾ ಪದ್ಧತಿಯಡಿ ಪಿ.ಯು.ಸಿ.ಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ತಿರುಪತಿ ವಿಶ್ವವಿದ್ಯಾನಿಲಯದ ಶಾಸ್ತ್ರೀ (ಬಿ.ಎ.) ಪದವಿಯಲ್ಲಿ ವಿಶಿಷ್ಟ ಶ್ರೇಣಿ ಪಡೆದು ತೇರ್ಗಡೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವೇದವಿಜ್ಞಾನ ಗುರುಕುಲದ ಆಚಾರ್ಯನಾಗಿ ಸೇವೆ ಸಲ್ಲಿಸುತ್ತಾ ಜಯಚಾಮರಾಜೇಂದ್ರ ಸಂಸ್ಕೃತ ಕಲಾಶಾಲೆಯಲ್ಲಿ ಕರ್ನಾಟಕದಲ್ಲಿ ಸಂಸ್ಕೃತದಲ್ಲಿ ನಡೆಸುವ ವಿದ್ವತ್ ಪರೀಕ್ಷೆಗೂ, ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಎಂ.ಎ. ಪರೀಕ್ಷೆಗೂ ಅಧ್ಯಯನ. ವಿದ್ವಾನ್ ಮಹಾಬಲೇಶ್ವರ ಭಟ್ ಅವರ ಸಾನ್ನಿಧ್ಯದಲ್ಲಿ ಸಂಸ್ಕೃತ ವ್ಯಾಕರಣದ ಪತಂಜಲಿ ಮಹಾಭಾಷ್ಯದ ಅಭ್ಯಾಸ.

ಪ್ರಬೋಧಿನಿ ಗುರುಕುಲದ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಬರೆದಿರುವ ''ಹಿರೇಮಗಳೂರು ಒಂದು ಅಧ್ಯಯನ'' ಎಂಬ ಲಘುಶೋಧ ಪ್ರಬಂಧಕ್ಕೆ ''ಭಾರತೀಯ ಇತಿಹಾಸ ಸಂಕಲನ ಸಮಿತಿ''ಯಿಂದ ಮನ್ನಣೆ ಹಾಗೂ ಪ್ರಕಾಶಿಸಲು ಅವರ ನಿರ್ಧಾರ.

ಕಳೆದ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಬರೆದಿರುವ ದರ್ಶನ ಸಂಬಂಧಿತ ಶೋಧ ಪ್ರಬಂಧ ''ಕಾರಿಕಾಕರ''ಕ್ಕೆ ವಿದ್ವಜ್ಜನರ ಮನ್ನಣೆ. ಅದನ್ನು ಪುಸ್ತಕರೂಪದಲ್ಲಿ ಹೊರತರಲು ಗುರುಕುಲದ ನಿರ್ಧಾರ.

ಐರ್ಲಂಡ್ ''ಸ್ಕೂಲ್ ಆಫ್ ಫಿಲಾಸಫಿ'' ಸದಸ್ಯ ರೂಢ್‌ಗರ್ ಅವರಿಗೆ ಗುರುಕುಲದಲ್ಲಿ ವ್ಯಾಕರಣ ಪಾಠ.

ಈ ಮಧ್ಯೆ ಈ ವರ್ಷದ ಸಪ್ಟೆಂಬರ್‌ದಲ್ಲಿ ಶ್ರೀ ಮದ್ಭಗವದ್ಗೀತೆಯ ಹದಿನೆಂಟು ಅಧ್ಯಾಯದ ಕಂಠಪಾಠ ಪರೀಕ್ಷೆಯಲ್ಲಿ ಶೃಂಗೇರಿ ಶಾರದಾಪೀಠದ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥರಿಂದ ಆಶೀರ್ವಾದ ಹಾಗೂ ಪುರಸ್ಕಾರದ ಗಳಿಕೆ

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಇತ್ತೀಚೆಗೆ ಜರಗಿದ ಸಮಾರಂಭದಲ್ಲಿ ಕರ್ನಾಟಕ ಚಿನ್ಮಯ ಮಿಷನ್‌ನ ಮುಖ್ಯಸ್ಥರಾದ ಪರಮಪೂಜ್ಯ ಶ್ರೀ ಶ್ರೀ ಬ್ರಹ್ಮಾನಂದ ಸರಸ್ವತೀ ಸ್ವಾಮಿಯವರು ಇವರನ್ನು ಸನ್ಮಾನಿಸಿದರು.

ಅಪರೂಪದ ಸಾಧಕ ಶ್ರೀ ತಿಲಕರವರಿಗೆ 'ಶ್ರೀಶಾರದಾ' ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಶ್ರೀ ಕೃಷ್ಣಾಯನ (...2ನೇ ಪುಟದಿಂದ)

ರೋಹಿಣಿಯಲ್ಲೂ ಅನೇಕ ಮಕ್ಕಳಾದರು. ಅವರಲ್ಲಿ ಕೆಲವರನ್ನು ಹೆಸರಿಸಬಹುದು - ಬಲರಾಮ, ಗದ, ಸಾರಣ, ದುರ್ಮದ, ವಿಪುಲ, ಧ್ರುವ, ಕೃತ. ಇವರಲ್ಲಿ ಬಲರಾಮನು ದೇವಕಿಯ ಗರ್ಭದಲ್ಲಿರುವಾಗಲೇ ವಿಷ್ಣು ಮಾಯೆಯಿಂದ ರೋಹಿಣಿಯ ಗರ್ಭಕ್ಕೆ ಸೇರಿಸಲ್ಪಟ್ಟವನು. ಆದುದರಿಂದ ಬಲರಾಮ ದ್ವೈಮಾತುರ.

ಉಗ್ರಸೇನನ ಮಕ್ಕಳಲ್ಲಿ ಕಂಸನು ಅತಿದುಷ್ಟನಾಗಿದ್ದನು. ನಿಜ ಹೇಳಬೇಕೆಂದರೆ ಅವನು ರಾಕ್ಷಸನೇ ಆಗಿದ್ದನು. ಅದಕ್ಕೊಂದು ಹಿನ್ನೆಲೆಯಿದೆ. ಒಮ್ಮೆ ಉಗ್ರಸೇನನ ಹೆಂಡತಿ ವನವಿಹಾರಕ್ಕೋ, ಜಲವಿಹಾರಕ್ಕೋ, ಯಮುನೆಯ ತೀರಕ್ಕೆ ಹೋಗಿದ್ದಳು. ಆಗ ಅವಳಿಗೆ ಕಾಮೋದ್ರೇಕವಾಯಿತು. ಅಷ್ಟರಲ್ಲಿ ದ್ರುಮಿಲನೆಂಬ ರಾಕ್ಷಸನು ಅವಳನ್ನು ನೋಡಿ ಉಗ್ರಸೇನನ ರೂಪವನ್ನು ತಾಳಿ ಅವಳ ಸಂಪರ್ಕ ಮಾಡಿದನು. ಅವಳಿಗೆ ಅದು ಉಗ್ರಸೇನನಲ್ಲವೆಂದು ತಿಳಿಯುವಷ್ಟರಲ್ಲಿ ಅಚಾತುರ್ಯ ನಡೆದುಹೋಗಿತ್ತು. ಆಗ ಅವಳು, "ನಿನ್ನ ದುಷ್ಟ ಬೀಜದಿಂದ ಜನಿಸುವ ಮಗನು ದುಷ್ಟನಾಗಿ ಯದುವಂಶೀಯನಿಂದಲೇ ಹತನಾಗಲಿ" ಎಂದು ಶಪಿಸಿದಳು. ಹೀಗೆ ಹುಟ್ಟಿದ ಕಂಸನು ರಾಕ್ಷಸನೇ ಆದನು. ಅವನು ತಂದೆಯಾದ ಉಗ್ರಸೇನನನ್ನೇ ಪಟ್ಟದಿಂದಿಳಿಸಿ ಸೆರೆಯಲ್ಲಿಟ್ಟನು. ಕಂಸನು ಜರಾಸಂಧನ ಮಕ್ಕಳಾದ ಆಸ್ತಿ, ಪ್ರಾಸ್ತಿಯರನ್ನು ವಿವಾಹವಾಗಿದ್ದನು.

ಅನುವಿನ ಮರಿಮಗನಾದ ಸಾತ್ವತನ ಮಗನೇ ಮಹಾಭೋಜ. ಅವನು ಪರಮಧಾರ್ಮಿಕ. ಆದುದರಿಂದ ಅವನ ವಂಶಜರನ್ನು ಭೋಜರೆಂದು ಕರೆಯುತ್ತಾರೆ. ಸಾತ್ವತ ವಂಶೀಯರನ್ನು ಸಾತ್ವತರೆಂದೂ ಕರೆಯುವುದಿದೆ. ಈ ಸಾತ್ವತನ ಪೀಳಿಗೆಯಲ್ಲಿ ಅನಮಿತ್ರನೆಂಬವನಿದ್ದನು.. ಅವನಿಗೆ ನಿಮ್ನ, ಶಿನಿ, ವೃಷ್ಣಿ ಎಂಬ ಮಕ್ಕಳಿದ್ದರು, ನಿಮ್ನನ ಮಕ್ಕಳು ಸತ್ರಾಜಿತ ಮತ್ತು ಪ್ರಸೇನ, ಶಿನಿಯ ಮಗ ಸತ್ಯಕ. ಸತ್ಯಕನ ಮಗ ಯುಯುಧಾನ, ಸತ್ಯಕನ ಮಗನಾದುದರಿಂದ ಸಾತ್ಯಕಿ ಎಂದೂ ಅವನು ಕರೆಯಲ್ಪಡುತ್ತಿದ್ದನು. ವೃಷ್ಣಿಯ ಮಗ ಶ್ವಫಲ್ಕ. ಇವನು ಕಾಶೀರಾಜನ ಮಗಳಾದ ನಾಂದಿನಿಯನ್ನು ಮದುವೆಯಾಗಿ ಅಕ್ರೂರನೆಂಬ ಪುತ್ರನನ್ನು ಪಡೆದಿದ್ದನು.

ದ್ವಾಪರದ ಕೊನೆಯ ಈ ಕಾಲ ಘಟ್ಟದಲ್ಲಿ ಸಾವಿರಾರು ದೈತ್ಯರು ರಾಜರಾಗಿ ಲೋಕಕಂಟಕರಾಗಿದ್ದರು. ಮುಖ್ಯವಾಗಿ ಧರ್ಮವನ್ನು, ಸಜ್ಜನರನ್ನು ಬಹುವಾಗಿ ಪೀಡಿಸುತ್ತಿದ್ದರು. ಇವರ ಉಪಟಳದಿಂದ ಹೈರಾಣಾದ ಭೂದೇವಿಯು ಒಂದು ಗೋವಿನ ರೂಪತಾಳಿ ಕಣ್ಣೀರು ಸುರಿಸುತ್ತ ಬ್ರಹ್ಮದೇವನ ಬಳಿಗೆ ಹೋಗಿ ತನ್ನಗೋಳನ್ನು ನಿವೇದಿಸಿಕೊಂಡಳು. ಬ್ರಹ್ಮನು ಶಂಕರ, ಇಂದ್ರಾದಿದೇವತೆಗಳನ್ನೂ, ಗೋವನ್ನೂ ಕೂಡಿಕೊಂಡು ಕ್ಷೀರಸಾಗರದ ತೀರಕ್ಕೆ ಹೋದನು. ಅಲ್ಲಿ ಬ್ರಹ್ಮನು ಸಮಾಧಿಸ್ಥನಾದನು. ಆ ಸಮಾಧಿ ಸ್ಥಿತಿಯಲ್ಲಿ ಬ್ರಹ್ಮನಿಗೆ ಭಗವದ್ವಾಣಿ ಕೇಳಿಸಿತು. ಅದನ್ನು ಬ್ರಹ್ಮನು ದೇವತೆಗಳಿಗೆ ತಿಳಿಸಿದನು. ಭಗವಂತನಾದ ಶ್ರೀಮನ್ನಾರಾಯಣನಿಗೆ ಭೂದೇವಿಯ ಶೋಚನೀಯ ಸ್ಥಿತಿಯ ಅರಿವಿದೆ. ಅವನು ಸದ್ಯದಲ್ಲಿಯೇ ಯದುವಂಶದ ವಸುದೇವನ ಮಗನಾಗಿ ಅವತರಿಸುವನು. ಅವನಿಗೆ ಸಹಾಯಕರಾಗಿ ಇತರ ದೇವತೆಗಳೂ ಭೂಮಿಯ ಮೇಲೆ ಅವತರಿಸಬೇಕು. ಪರಮಾತ್ಮನಿಗೆ ಅಣ್ಣನಾಗಿ ಮಹಾಶೇಷನ ಅವತಾರವಾಗುವುದು. ಲಕ್ಷ್ಮಿಯೂ ಅವತರಿಸಿ ಭಗವಂತನ ಪತ್ನಿಯಾಗಿ ಲೀಲೆಗಳನ್ನು ಮೆರೆಸುವಳು. ವೈಕುಂಠಪತಿಯು ತನ್ನಲೀಲೆ, ವಿಭೂತಿಗಳನ್ನು ಪ್ರಕಟಪಡಿಸುತ್ತ ದುಷ್ಟರನ್ನು ಸಂಹರಿಸುವನು. ಇಷ್ಟು ಹೇಳಿದ ಬ್ರಹ್ಮನು ಭೂದೇವಿಯನ್ನು ಸಂತೈಸಿ ಸತ್ಯಲೋಕಕ್ಕೆ ಹೊರಟು ಹೋದನು. ಇತರ ದೇವತೆಗಳೂ ತಂತಮ್ಮ ಸ್ಥಾನಗಳನ್ನು ಸೇರಿಕೊಂಡರು.

ಶ್ರೀಮನ್ನಾರಾಯಣನು ಅವತಾರವೆತ್ತಲು ವಸುದೇವ-ದೇವಕಿಯರನ್ನೇ ಆಶ್ರಯಿಸಿದ್ದಕ್ಕೆ ಕಾರಣವಿದೆ. ಅದಕ್ಕಾಗಿ ಅವರ ಪೂರ್ವಜನ್ಮದ ವೃತ್ತಾಂತವನ್ನು ತಿಳಿಯಬೇಕು. ಸ್ವಾಯಂಭುವಮನ್ವಂತರದಲ್ಲಿ ಪೃಶ್ನಿ ಮತ್ತು ಸುತಪ ಎಂಬ ಪ್ರಜಾಪತಿಯೂ ದಂಪತಿಗಳಾಗಿದ್ದರು. ಬ್ರಹ್ಮದೇವನು ಅವರಿಗೆ ಸಂತಾನವನ್ನು ಪಡೆಯಲು ಹೇಳಿದಾಗ ಅವರು ಪರಮಪುರುಷನಾದ ಶ್ರೀ ಹರಿಯಲ್ಲಿ ಮನಸ್ಸುನೆಟ್ಟು ಹನ್ನೆರಡು ಸಾವಿರ ವರ್ಷಗಳ ಕಠಿನ ತಪಸ್ಸನ್ನಾಚರಿಸಿದರು. ಭಗವಂತನು ಪ್ರಸನ್ನನಾಗಿ "ನನ್ನಂತಹ ಪುತ್ರನು ನಿಮಗಾಗಲಿ"ಎಂದು ವರವಿತ್ತನು. ಅದರಂತೆ ಪೃಶ್ನಿಗರ್ಭ ಎಂಬ ಹೆಸರಿನಿಂದ ಭಗವಂತನೇ ಅವರ ಮಗನಾಗಿ ಹುಟ್ಟಿದನು. ಅನಂತರದ ಜನ್ಮದಲ್ಲಿ ಪೃಶ್ನಿ ಅದಿತಿಯಾಗಿಯೂ, ಸುತಪನು ಕಶ್ಯಪನಾಗಿಯೂ ಜನಿಸಿದರು. ಆಗ ಪರಮಾತ್ಮನು ವಾಮನನಾಗಿ ಅವತರಿಸಿದನು. ಆ ದಂಪತಿಗಳೇ ದ್ವಾಪರದಲ್ಲಿ ದೇವಕೀ ವಸುದೇವರಾಗಿ ಹುಟ್ಟಿಬಂದರು. ಅದಕ್ಕಾಗಿಯೇ ಶ್ರೀ ಹರಿಯು ಅವರ ಪುತ್ರನಾಗಿ ಅವತಾರವೆತ್ತಿದ್ದು. ವಸುದೇವನು ದೇವಾಧಿದೇವನಿಗೆ ತಂದೆಯಾಗುವನೆಂದೇ ದೇವತೆಗಳು ಆನಕದುಂದುಭಿಗಳನ್ನು ಮೊಳಗಿಸಿದ್ದು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

# ಜೀರ್ಣೋದ್ಧಾರ -ನೆಲೆ, ಹಿನ್ನೆಲೆ

(ಹಿಂದಿನ ಸಂಚಿಕೆಯಿಂದ...)

ಬ. ಎ. ಶರ್ಮ, ರಜತಪೀಠಪುರಂ

ವರ್ಷಕ್ಕೊಮ್ಮೆ ಉತ್ಸವ ದೋಷಗಳೇನಾದರೂ ಉಂಟಾದರೆ ಪ್ರಾಯಶ್ಚಿತ್ತ ಆಗಬೇಕು. ಪ್ರಸಾದ ಬಿಂಬಾದಿಗಳಿಗೆ ಜೀರ್ಣತೆ ಉಂಟಾದರೆ ಜೀರ್ಣೋದ್ಧಾರ ಆಗಬೇಕು. ಈ ಕ್ರಮಗಳು ಸಾನಿಧ್ಯವನ್ನು, ಸಂಪತ್ತನ್ನು ಹೆಚ್ಚಿಸುತ್ತದೆ. ಆದ್ದರಿಂದ, ದೋಷರಹಿತವಾದ- ಗುಣಪೂರ್ಣವಾದ ಮೂಹೂರ್ತಕ್ಕಾಗಿ ವಿನಯಿಯೂ, ಸುಶೀಲನೂ, ಪಂಡಿತನೂ, ಪಂಚಸಿದ್ಧಾಂತ ಕೋವಿದನೂ, ಜ್ಞಾನಿಯೂ ಆದ ದೈವಜ್ಞನನ್ನು ಕಂಡು ಪ್ರತಿಷ್ಠಾ ಲಗ್ನವನ್ನು ತಿಳಿಯಬೇಕು. ಆ ಸುಮುಹೂರ್ತದಲ್ಲಿ ಪ್ರತಿಷ್ಠಾ ವಿಧಿಯು ನೆರವೇರಬೇಕು. ಪ್ರತಿಷ್ಠಾ ಮುಹೂರ್ತವನ್ನು ಶಾಸ್ತ್ರ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ. ಪಕ್ಷೇಚ್ಛೇಯನ ಉತ್ತರೇನ್ನಭ ಮಘಾಸ್ವಿಷ್ಟಾಃ ಪ್ರತಿಷ್ಠಾದಯೋ ವರ್ಜ್ಯಾ ವಾರುಣ ಸೌರ್ಯಸೃಗ್ದಿನ ಧನುರ್ಮೇಷೈಣ ಜೂಕಾ ಇಹ । ಧಿಸ್ಥಾ ರಂಧ್ರಶೂಭಾಂತ್ಯಗಾ ಅಪಿಖರಾಃ ಪೂರ್ವ್ ನಿಶಾತ್ರ್ಯಂಶಕ್ ವಿದರ್ಕ್ಷಂ ಚ ಮತೋಷ್ಟ ಬಂಧ ಉಭಯೋಃ ಪಕ್ಷಾಯನದ್ವಂದ್ವಯೋಃ॥

ಶುಕ್ಲ ಪಕ್ಷದಲ್ಲಿ ಉತ್ತರಾಯಣದಲ್ಲಿ ಮಖಾನಕ್ಷತ್ರ ಸಹಿತವಾದ ಅನ್ನಪ್ರಾಶನಕ್ಕೆ ಹೇಳಿದ ನಕ್ಷತ್ರದಲ್ಲಿ ಪ್ರತಿಷ್ಠಾದಿಗಳನ್ನು ಮಾಡಬಹುದು. ಶತಭಿಷಾವರ್ಜ್ಯ. ಶನಿವಾರ, ಮಂಗಳವಾರ ವರ್ಜ್ಯ, ಮೇಷ, ತುಲಾ, ಧನು ಮಕರ ರಾಶಿಗಳು ವರ್ಜ್ಯ. 5, 8, 9, 12 ಈ ಭಾವಗಳಲ್ಲಿ ಪಾಪಗ್ರಹರಿರಕೂಡದು. ರಾತ್ರಿಯನ್ನು 3 ಭಾಗಮಾಡಿ ಮೊದಲ 2 ಭಾಗಗಳನ್ನು ಬಿಡಬೇಕು. ಆಚಾರ ಸಂಗ್ರಹದಲ್ಲಿ ಹೇಳಿದ 'ವೇಧ'ವನ್ನು ಬಿಡಬೇಕು. 2 ಪಕ್ಷಗಳಲ್ಲೂ 2 ಅಯನಗಳಲ್ಲೂ ಅಷ್ಟಬಂಧವನ್ನು ಮಾಡಬಹುದು.

ಹೀಗೆ ಬಿಂಬದಲ್ಲಿ ಇಷ್ಟ ದೇವರನ್ನು ಸಕಲಕಲಾಯುಕ್ತವನ್ನಾಗಿ ಪ್ರತಿಷ್ಠಾಪಿಸಿ ನಂತರ ಕಾಲಕಾಲಕ್ಕೆ ಉತ್ಸವವನ್ನು ನಡೆಸಬೇಕು. ಅಥಪ್ರತಿಷ್ಠಾಸ್ನಪನಾದ್ಯನಂತರಂ... ಈ ರೀತಿ, ಪ್ರತಿಷ್ಠೆ, ಬ್ರಹ್ಮ ಕಲಶಾದಿಗಳ ನಂತರ ಎಲ್ಲಾ ಒಳ್ಳೆಯ ಪರ್ವಗಳಲ್ಲಿಯೂ ಉತ್ಸವವನ್ನು ನಡೆಸಬೇಕು. ಅನಂತರ ಪ್ರತಿವರ್ಷ ಪ್ರತಿಷ್ಠಾ ದಿವಸದ ವ್ಯವಸ್ಥೆಯನ್ನು ಮಾಡಿ, ಆಗಮಗಳಲ್ಲಿ ಹೇಳಿದ ಸಪ್ತಾಹೋತ್ಸವಾದಿ ವಿಭಾಗ ಕ್ರಮದಂತೆ ಸರ್ವಾಭಿಷ್ಟ ಪ್ರಾಪ್ತಿಗಾಗಿ ದೇವರನ್ನು ಆರಾಧಿಸಬೇಕು. ಹೀಗೆ ಪ್ರತಿಷ್ಠೆಗೊಂಡ ದೇವರನ್ನು ಅನ್ಯ ಮಂತ್ರಗಳಿಂದ ಅರ್ಚಿಸುವುದು ಯುಕ್ತವಲ್ಲ. ಅದು ದೋಷಕ್ಕೆ ಕಾರಣವಾಗುತ್ತದೆ. ದೇವತಾಂತರ ಪೂಜೆಯನ್ನು ಶಾಸ್ತ್ರಗ್ರಂಥಗಳು ನಿಷೇಧಿಸಿದೆ.

ಆವಾಹ್ಯ ದೇವತಾಮೇಕಮರ್ಚಯೇತ್ ಅನ್ಯದೇವತಾಮ್ ॥ ಉಭಯೋಃ ಶಾಪತಸ್ತಸ್ಯ- ವಿಪರೀತಂ ಫಲಂ ವಿದುಃ॥ ಬಿಂಬದಲ್ಲಿ ಒಂದು ದೇವತೆಯನ್ನು ಆವಾಹಿಸಿ ಇನ್ನೊಂದು ದೇವತೆಯನ್ನು ಅರ್ಚಿಸಿದರೆ ಎರಡೂ ದೇವತೆಗಳ ಅಸಮಾಧಾನದಿಂದ ವಿರುದ್ಧ ಫಲ ಉಂಟಾಗುತ್ತದೆ. ತ್ಯಕ್ತಂ ಮಂತ್ರೈಶ್ಚ ದೈದೇವೈಶ್ಚ ತ್ಯಾಜ್ಯಂ ಪಾಷಣವದ್ಭವೇತ್। ತಲ್ಲಿಂಗ ಮಾಶ್ರಯಂತೀಹ ಪಿಶಾಚಾ ಬ್ರಹ್ಮರಾಕ್ಷಸಾಃ ॥

ದೇವತಾ ಸಾನ್ನಿಧ್ಯ ವಿಶೇಷವು ಕ್ಷಯಿಸಿದ, ವಿಧಿ ಪೂರ್ವಕ ಪೂಜಾದಿಗಳಿಂದ ರಹಿತವಾದ ಲಿಂಗಾದಿಗಳನ್ನು ವಿಸರ್ಜಿಸಬೇಕು. ಯಾಕೆಂದರೆ ಅದರಲ್ಲಿ ಪಿಶಾಚ ಬ್ರಹ್ಮ ರಾಕ್ಷಸಾದಿ ದುರ್ದೇವತಾ ಸಾನ್ನಿಧ್ಯವಿರುತ್ತದೆ. ಪೃಥಕ್ಪ್ರದರ್ಚಾವ ತಾರಾಣಾಂ ಏಕ ಬೇರವಿಧಾನತಃ । ಅನ್ಯಮಂತ್ರ ನಿಷೇಧಾಚ್ಚ ಅನ್ಯಾರ್ಚಿತ ನಿಷೇಧತಃ ॥ - ಅರ್ಚಾವತಾರಗಳು ಬೇರೆ ಬೇರೆಯೆಂದು ಶಾಸ್ತ್ರವಿಧಿ ಇರುವುದರಿಂದಲೂ ಒಂದು ಗರ್ಭಗುಡಿಯಲ್ಲಿ ಒಂದೇ ಪ್ರತಿಮಾ ಸಾನ್ನಿಧ್ಯವೆಂಬ ನಿಯಮವಿರುವುದರಿಂದಲೂ, ಇತರ ಮಂತ್ರಗಳಿಂದ ಪೂಜೆಗೆ ನಿಷೇಧವಿರುವುದರಿಂದಲೂ, ಅನ್ಯ ಕುಟುಂಬದಿಂದ ಪೂಜಿತವಾದ ಪ್ರತಿಮಾದಿಗಳಿಗೆ ನಿಷೇಧವಿರುವುದರಿಂದಲೂ ಗರ್ಭಗುಡಿಯಲ್ಲಿ ಬೇರೆ ಸಾನ್ನಧ್ಯವಿರುವುದು ವಿಹಿತವಲ್ಲ. ಪ್ರತಿಮಾ ಪೀಠಯಂತ್ರೇಪುನ ನಿತ್ಯಮಭೀಷೇಚನಮ್ । ಸಂಕ್ರಾಂತ್ ಪರ್ವಕಾಲೇ ವಾ ಕಾರ್ಯಂ ಸ್ಯಾದಭೀಷೇಚನಮ್ ॥ -ಪ್ರತಿಮೆ, ಪೀಠ, ಯಂತ್ರಗಳಿಗೆ ನಿತ್ಯವೂ ಅಭೀಷೇಕಕ್ಕೆ ವಿಧಿ ಇಲ್ಲ, ಸಂಕ್ರಾಂತಿ ಪರ್ವಕಾಲಗಳಲ್ಲಿ ಅದಕ್ಕೆ ಅಭಿಷೇಕಬೇಕು. ಆದರೆ, ಸ್ಥಿರಪ್ರತಿಷ್ಠಾ ವಿಷಯೇ ಕಾರ್ಯಂ ನಿತ್ಯಾಭೀಷೇಚನಮ್ । ಮೃಣ್ಮಯಾದೌ ಪೃಥಕ್ ಬಿಂಬಂ ಸ್ನಾನಾರ್ಥಂ ಕಲ್ಪ್ಯಮೇವಹಿ ॥

'ಚಲಾಚಲೇತಿದ್ವಿವಿಧೇ ಪ್ರತಿಷ್ಠೆ' ಎಂಬ ಶಾಸ್ತ್ರೋಕ್ತಿಯಂತೆ ಪ್ರತಿಷ್ಠೆಯು 2 ವಿಧ. ಸ್ಥಿರ ಪ್ರತಿಷ್ಠೆಯಾದರೆ ನಿತ್ಯವೂ ಅಭಿಷೇಕ ವಿಧಿ ಇದೆ. ಮೃತ್ತಿಕಾ ಬಿಂಬವಾದರೆ ಅಭಿಷೇಕಾರ್ಥವಾಗಿ ಬೇರೆ ಬಿಂಬವನ್ನಿಡಬೇಕು. ಮೂಲಬಿಂಬಂ ಸ್ನಾನಬಿಂಬ ಮಲಂಕಾರ್ಥಮೇವಚ । ಉತ್ಸವಾರ್ಥಂ ಚಯಾತ್ರಾರ್ಥಂ ಪಂಚಬಿಂಬವಿಧಿಃಸ್ಮೃತಃ ॥ ಮೂಲಬಿಂಬ, ಸ್ನಾನಬಿಂಬ, ಅಲಂಕಾರಬಿಂಬ, ಉತ್ಸವಬಿಂಬ, ಯಾತ್ರಾಬಿಂಬ ಎಂದು 5 ಬಗೆಯದ್ದಾಗಿವೆ. ಹಿಂದೆ ಹೇಳಿದ ಶೈಲೀದಾರುಮಯೀ.... ಎಂಬ ಬಿಂಬ ಭೇದಗಳು ಬಿಂಬರಚನೆಯಲ್ಲಿನ ಭೇದಗಳನ್ನು ತಿಳಿಸಿದ್ದು, ಇಲ್ಲಿ ಮಾತ್ರ ಅರ್ಚನೆಗೆ ಸಂಬಂಧಿಸಿದ್ದು. ಮೂಲಬಿಂಬಾದಿ ಎಲ್ಲಾ ಬಿಂಬಗಳ ಯೋನಿ, ಧ್ಯಾನ, ಮೂಲ ಗುರೂಪದೇಶದ ರೀತಿ ಆಯುಧಾದಿ ಅಲಂಕಾರಗಳು ಒಂದೇ ರೀತಿ ಇರಬೇಕು.


ಹೀಗೆ ದೇವಾಲಯ ನಿರ್ಮಾಣವಾಗಿ, ಪ್ರತಿಷ್ಠಾ ವಿಧಿಗಳು ನಡೆದು, ಕಾಲಕ್ರಮದಲ್ಲಿ ಅಲ್ಲಿ ಕೆಲವು ದೋಷಗಳು ಉಂಟಾಗುವ ಸಂಭವವಿದೆ. ಅಭಿಷೇಕ, ಪೂಜೆ, ಮಂತ್ರ, ಉತ್ಸವಾದಿ ಸಂದರ್ಭಗಳು ಹೀಗೆ ಯಾವುದೇ ಸಂದರ್ಭದಲ್ಲಾದರೂ ಏನಾದರೊಂದು ದೋಷ ಉಂಟಾಗುವ ಸಾಧ್ಯತೆ ಇರುತ್ತದೆ.


ಭಕ್ತ ಜನರನ್ನು ಅನುಗ್ರಹಿಸುವುದಕ್ಕಾಗಿ ಅರ್ಚೋಪಾದಿಯಲ್ಲಿ ಸದಾ ಸಾನಿಧ್ಯವನ್ನು ದೇವನು ವಹಿಸಿರಲು ಶ್ರೇಯಸ್ಸನ್ನು ಹೊಂದಲು ಪ್ರತಿಬಂಧಕವಾಗಿ ನಿಮಿತ್ತಗಳುಂಟಾದರೆ ಆ ದುರ್ನಿಮಿತ್ತಗಳ ಪರಿಹಾರಕ್ಕಾಗಿ ಕೂಡಲೇ ದೈವಜ್ಞ ಮುಖೇನ ದೋಷಗಳನ್ನು ತಿಳಿದು ಪರಿಹಾರ ಮಾಡಬೇಕು.

ಸಾಮಾನ್ಯತಃ ಇನ್ನು ಮುಂದೆ ವಿವರಿಸುವ ಕೆಲವೊಂದು ಪ್ರಸಂಗಗಳಲ್ಲಿ ಪರಿಹಾರವನ್ನು ಮಾಡಬೇಕು. ಕ್ಷೇತ್ರೇಮೃತಿರ್ಜನನಮಂಕಣ ಮಂಟಪಾದ್... ಕ್ಷೇತ್ರ, ಪರಿಸರ, ಅಂಕಣ, ಮಂಟಪಾದಿಗಳಲ್ಲಿ ಜನನ-ಮರಣಗಳು; ಮೂತ್ರ, ರಕ್ತಾದಿ ಪಾತಗಳು, ಪತಿತಾದಿಪ್ರವೇಶ, ಗರ್ಭಗುಡಿಯಲ್ಲಿ ಗೂಬೆ-ಗಿಡುಗ-ಕಾಗೆ-ನಾಯಿ-ಕತ್ತೆ-ಒಂಟೆ-ಹಂದಿ-ನರಿ-ಕರಡಿ-ಕೇರೆಹಾವು ಇತ್ಯಾದಿ ಪ್ರವೇಶ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702
ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ





ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

PRAMOD
AUTOMOBILES
Ph : 2491723 (O)
2493633 (H.O.)
2212723 (R)
KARANGALPADY, MANGALORE - 575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln. K. HARSHA KUMAR

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಕುಸುಮಾ ಮತ್ತು ಶ್ರೀ ಕಾಪು ಶ್ರೀ ಮಾಧವರಾವ್‌ರವರ ಪುತ್ರಿ **ಅನುಪಮಾ** ಹಾಗೂ ಶ್ರೀಮತಿ ಜಯಲಕ್ಷ್ಮೀ ಮತ್ತು ರಟ್ಟಾಡಿ ಶ್ರೀ ವಾಸುದೇವ ಹೆಬ್ಬಾರರವರ ಪುತ್ರ **ಮಂಜುನಾಥ** ಇವರ ವಿವಾಹವು ತಾ.11-2-2009 ರಂದು ಉಡುಪಿ ಅಜ್ಜರಕಾಡು ಶ್ರೀ ಗೋವಿಂದ ಕಲ್ಯಾಣ ಮಂಟಪದಲ್ಲಿ ನೆರವೇರಿತು

## ಗೃಹಪ್ರವೇಶ

ಹೆರಂಜಾಲು ಸೀತಾರಾಮ ಮೇರ್ಟ ಮತ್ತು ಮಕ್ಕಳು ನೂತನವಾಗಿ ನಿರ್ಮಿಸಿದ 'ಶ್ರೀ ಸುಬ್ರಹ್ಮಣ್ಯ ಸನ್ನಿಧಿ'ಯ ಗೃಹಪ್ರವೇಶವು ತಾ.04-02-2009ರ ರಾತ್ರಿ ಜರಗಿತು. ತಾ.05-02-2009ರಂದು ಚಂಡಿಕಾಯಾಗ ಬ್ರಾಹ್ಮಣ ಸಮಾರಾಧನೆಯೊಂದಿಗೆ ನೆರವೇರಿತು.

## ಜನನ

ಕುಂಜಿಬೆಟ್ಟು ಉಡುಪಿಯಲ್ಲಿ ವಾಸವಾಗಿರುವ ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಕೃಷ್ಣಪ್ರಸಾದ ದಂಪತಿಗಳಿಗೆ ದಿನಾಂಕ 22-01-2009ರಂದು ಗಂಡು ಮಗುವಿನ ಜನನವಾಗಿರುತ್ತದೆ.


□ □ □ □ □

ಪಡುಬಿದ್ರಿ, ಪಾದೆಬೆಟ್ಟು ಶ್ರೀ ಶ್ರೀನಿವಾಸ ಶರ್ಮ ಮತ್ತು ಶ್ರೀಮತಿ ಚೇತನಾರವರಿಗೆ ದಿನಾಂಕ 06-12-2008ರಂದು ಹೆಣ್ಣು ಶಿಶುವಿನ ಜನನವಾಗಿರುತ್ತದೆ.

## ವಿಳಾಸ ಬದಲಾವಣೆ

**ಶ್ರೀ ಯು. ಅರವಿಂದ ಕುಮಾರ್**
Quarters No.52, KMC Quarters, Manipal - 576 104.

## 'ಶಾಸ್ತ್ರೀಸ್' ಮನೆಗೆ ತೋಟಗಾರಿಕಾ ಪ್ರಶಸ್ತಿ



ಮಂಗಳೂರು-ಕೊಣಾಜೆ ಗ್ರಾಮದ ನಡುಪದವು ಎಂಬಲ್ಲಿರುವ ಶ್ರೀ ಎಮ್. ಕೆ. ಸದಾಶಿವಯ್ಯ ಮತ್ತು ಶ್ರೀಮತಿ ವೇದಾವತಿ ದಂಪತಿಗಳಿಗೆ ಸೇರಿದ 'ಶಾಸ್ತ್ರೀಸ್' ಮನೆಯ ಉದ್ಯಾನವನಕ್ಕೆ ತೋಟಗಾರಿಕೆ ಇಲಾಖೆ, ಜಿಲ್ಲಾಡಳಿತ, ಮಂಗಳೂರು ಮಹಾನಗರಪಾಲಿಕೆ ಹಾಗೂ ಸಿರಿ ತೋಟಗಾರಿಕಾ ಸಂಘ (ರಿ.) ಮಂಗಳೂರು ಇವರ ಜಂಟಿ ಆಶ್ರಯದಲ್ಲಿ ಜನವರಿ 2009ರಲ್ಲಿ ಕದ್ರಿ ಉದ್ಯಾನವನದಲ್ಲಿ ನಡೆದ 'ತೋಟಗಾರಿಕಾ ಫಲಪುಷ್ಪ ಪ್ರದರ್ಶನ- 2009'ರ ಮಧ್ಯಮ ಉದ್ಯಾನವನಗಳ ಸ್ಪರ್ಧೆಯಲ್ಲಿ ಬಹುಮಾನ ದೊರಕಿದೆ. ಪರಿಸರಪ್ರಿಯರಾಗಿರುವ ಸದಾಶಿವಯ್ಯ ದಂಪತಿಗಳಿಗೆ ಇದು ಸತತವಾಗಿ 3ನೇ ವರ್ಷದಲ್ಲಿ ಬಂದ ಪ್ರಶಸ್ತಿ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 12-02-2009 | **ಕುಂಭಸಂಕ್ರಮಣ** |
| | **ಸಂಕಷ್ಟಹರ ಚತುರ್ಥೀ** |
| | ಚಂದ್ರೋದಯ ರಾತ್ರಿ ಗಂ.9.13ಕ್ಕೆ |
| 19-02-2009 | **ಶತಭಿಷಾನಕ್ಷತ್ರಾರಂಭ** |
| 20-02-2009 | **ಸರ್ವೈಕಾದಶೀ** |
| 22-02-2009 | **ಪ್ರದೋಷಃ** |
| 23-02-2009 | **ಮಹಾಶಿವರಾತ್ರಿ** |
| 25-02-2009 | **ಅಮಾವಾಸ್ಯಾ** |
| 04-03-2009 | **ಪೂರ್ವಾಭಾದ್ರಾನಕ್ಷತ್ರಾರಂಭ** |
| 07-03-2009 | **ಸರ್ವೈಕಾದಶೀ** |
| 08-03-2009 | **ಪ್ರದೋಷಃ** |
| 11-03-2009 | **ಪೂರ್ಣಿಮಾ** |
| 14-03-2009 | **ಮೀನ ಸಂಕ್ರಮಣ** |
| | **ಸಂಕಷ್ಟಹರ ಚತುರ್ಥೀ** |
| | ಚಂದ್ರೋದಯ ರಾತ್ರಿ ಗಂ.9.37ಕ್ಕೆ |

## ಕುಮಾರಿ ರಶ್ಮಿ ಡಿ. ರಾವ್



**ಭಾಷಣ ಸ್ಪರ್ಧೆಯಲ್ಲಿ ಪ್ರಥಮ**

ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರ ಧಾರವಾಡ, ಇವರು ಧಾರವಾಡ ವಿಭಾಗದಲ್ಲಿ ನಡೆಸಿದ ವಿಶ್ವ ಪರಿಸರ ದಿನಾಚರಣೆಯ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಕುವಾರಿ ರಶ್ಮಿ ಡಿ. ರಾವ್ ಪಡೆದುಕೊಂಡಿರುತ್ತಾಳೆ. ಈಕೆ ಕರ್ನಾಟಕ ಬ್ಯಾಂಕ್, ಧಾರವಾಡ ಶಾಖೆಯ ಪ್ರಬಂಧಕರಾದ ಶ್ರೀ ದಿವಾಕರ ಕೆ. ಎಸ್. ಮತ್ತು ಶ್ರೀಮತಿ ವಿಜಯಲಕ್ಷ್ಮೀ ಇವರ ಸುಪುತ್ರಿ. ಈ ವಿಶೇಷ ಸಾಧನೆಗಾಗಿ ಶ್ರೀ ಶಾರದಾ ಅಭಿನಂದನೆಗಳು.

**ಸಾಮೂಹಿಕ ಗಣಹೋಮ**

ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ತಿಂಗಳು **ಸಂಕಷ್ಟಹರ ಚತುರ್ಥಿಯಂದು** ನಡೆಯುತ್ತಿರುವ

**ಸಾಮೂಹಿಕ ಗಣಹೋಮವು**

ತಾ.14-03-2009ರಂದು ನಡೆಯಲಿದೆ.

**ಗಣಹೋಮ ಸೇವಾ ಶುಲ್ಕ ರೂ.51/-**

ಗಣಹೋಮ ಸೇವೆ ನೀಡಲು ಇಚ್ಛಿಸುವವರು ಶಾರದಾ ಮಂಟಪದ ಮೆನೇಜರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

**- ಶ್ರೀಶಾರದಾ ದೇವಸ್ಥಾನ ವೇದಿಕೆ**

ಶ್ರೀಶಾರದಾ ದೇವಸ್ಥಾನದಲ್ಲಿ **ಫೆಬ್ರವರಿ ತಿಂಗಳಲ್ಲಿ**

**ತಾ.14-03-2009ರ ಶನಿವಾರ**

ಬೆಳಿಗ್ಗೆ ಗಂಟೆ 11-00ರಿಂದ

**ಗಮಕವಾಚನ-ಪ್ರವಚನ**

ಕಾರ್ಯಕ್ರಮವು ನಡೆಯಲಿದೆ.

ವಾಚನ : ಭಾಗವತ, ಗಮಕಿ ನೀಲಾವರ **ಲಕ್ಷ್ಮೀನಾರಾಯಣರಾವ್**

ಪ್ರವಚನ : ಹವ್ಯಾಸಿ ತಾಳಮದ್ದಳೆ ಅರ್ಥಧಾರಿ, ನಾಟಕಕಾರ, ಪ್ರವಚನಕಾರ **ಶ್ರೀ ಬಾರ್ಕೂರು ನಾಗೇಶರಾವ್.**

**ಸರ್ವರಿಗೂ ಆದರದ ಸ್ವಾಗತ**

**- ಶ್ರೀಶಾರದಾ ದೇವಸ್ಥಾನ ವೇದಿಕೆ**

## ನಿಧನ

### ಶ್ರೀಮತಿ ವಸಂತಿ ಎಸ್.ರಾವ್

ದಿ। ವೈ. ಸಂಜೀವ ರಾವ್ ಇವರ ಪತ್ನಿ ಎರ್ಮಾಳಿನ ಶ್ರೀಮತಿ ವಸಂತಿ ಎಸ್.ರಾವ್ (69 ವರ್ಷ) ತಾ.22-01-2009ರಂದು ನಿಧನರಾದರು. ಇವರು ಮೂವರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನೂ ಅಗಲಿದ್ದಾರೆ.

□ □ □ □ □

### ಕಾಣಿಯೂರು ಸುಬ್ಬರಾವ್

ಮುಂಬಯಿ-ಮಾಹಿಮ್‌ನಲ್ಲಿ ವಾಸವಾಗಿದ್ದ ಕಾಣಿಯೂರು ಸುಬ್ಬರಾಯರು ಅಲ್ಪಕಾಲದ ಅಸೌಖ್ಯದಿಂದ ತಾ.17-01-2009ರಂದು ಮುಂಬಯಿಯಲ್ಲಿ ನಿಧನರಾದರು. ಅವರು ಮೂವರು ಹೆಣ್ಣು ಮಕ್ಕಳು, ಅನೇಕ ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ನಿಧನ ಕಾಲಕ್ಕೆ ಅವರಿಗೆ 90 ವರ್ಷ ವಯಸ್ಸಾಗಿತ್ತು.

**ಅಭಿನಂದನೆ**

## ರಂಗಗೀತೆ-ವೈಯಕ್ತಿಕ ಸ್ಪರ್ಧೆಯಲ್ಲಿ ದ್ವಿತೀಯಸ್ಥಾನ-ರಾಜ್ಯಪ್ರಶಸ್ತಿ ಬೆಳ್ತಂಗಡಿಯ ಸುಮನಾ ಬಿ.ರಾವ್



ಗದಗದ ಗಜೇಂದ್ರಗಡದಲ್ಲಿ ಇತ್ತೀಚೆಗೆ ರಾಜ್ಯಮಟ್ಟದ ಯುವಜನಮೇಳ ಸ್ಪರ್ಧೆಯಲ್ಲಿ ಬೆಳ್ತಂಗಡಿಯ ಸುಮನಾ ಬಿ.ರಾವ್ ಅವರು ರಂಗಗೀತೆ ವೈಯಕ್ತಿಕ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನದೊಂದಿಗೆ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ.

ಇವರು 2004-05ರಲ್ಲಿ ಮಂಡ್ಯ ಜಿಲ್ಲೆಯ ಕೀಲಾರದಲ್ಲಿ ನಡೆದ ರಾಜ್ಯಮಟ್ಟದ ಯುವಜನ ಮೇಳದಲ್ಲಿ ಗೀಗೀಪದ, ಜನಪದ ಗೀತೆ, ರಂಗಗೀತೆಯಲ್ಲಿ ಪ್ರಥಮಸ್ಥಾನ ಪಡೆದಿದ್ದರು. ಬೆಳ್ತಂಗಡಿ ತಾಲೂಕು ಮಟ್ಟದ ಯುವಜನ ಮೇಳದಲ್ಲಿ 2007-08, 2008-09ನೇ ಸಾಲಿನಲ್ಲಿ 2 ಬಾರಿಯೂ ವೈಯಕ್ತಿಕ ಚಾಂಪಿಯನ್ ಪಡೆದಿದ್ದರು. ಸತತ 4 ಬಾರಿ ಮೈಸೂರು ವಿಭಾಗ ಮಟ್ಟದ ಯುವಜನ ಮೇಳದಲ್ಲಿ ಭಾಗವಹಿಸಿ, ಸಂಗೀತ ಸ್ಪರ್ಧೆಯಲ್ಲಿ ಬಹುಮಾನ ಪಡೆದು ಕೀರ್ತಿ ತಂದಿದ್ದರು.

ಇವರು 2008ರ ಸಾಲಿನ ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಸೀನಿಯರ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಮಂಗಳೂರು ವಿಶ್ವವಿದ್ಯಾನಿಲಯ 2008ರ ಸಾಲಿನಲ್ಲಿ ಸ್ನಾತಕೋತ್ತರ ಪದವಿಯಲ್ಲಿ ತುಳು ಸಾಹಿತ್ಯದಲ್ಲಿ ಉನ್ನತ ಅಂಕ ಪಡೆದಿದ್ದಕ್ಕಾಗಿ, ಪೆರುವಾಯಿ ಸುಬ್ಬಯ್ಯ ಶೆಟ್ಟಿ ಸ್ಮರಣಾರ್ಥ ನಗದು ಬಹುಮಾನ ನೀಡಿ ಗೌರವಿಸಲಾಗಿತ್ತು.

ಬೆಳ್ತಂಗಡಿ ತಾಲೂಕಿನ ಕಿಲ್ಲೂರು ಕೊಕ್ರಾಡಿ ಬಾಲಕೃಷ್ಣರಾವ್ ಮತ್ತು ಶಾಂಭವಿ ದಂಪತಿಗಳ ಪುತ್ರಿಯಾಗಿರುವ ಇವರು ಸಂಗೀತ ವಿದುಷಿ ಕುಕ್ಕಿಲ ಶ್ಯಾಮಲ ನಾಗರಾಜ್ ಅವರ ಶಿಷ್ಯೆಯಾಗಿದ್ದು, ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಯುವ ವಿಭಾಗದ ಸ್ಥಾಪಕ ಕಾರ್ಯದರ್ಶಿ ದಿ। ಉದಯಚಂದ್ರರಾಯರ ಸಹೋದರಿಯಾಗಿದ್ದಾರೆ.

ಪ್ರಸ್ತುತ ವಾಮದಪದವು ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿದ್ದು, ಉದಯಗಾನ ಸಂಗೀತ ಕಲಾಸಂಘ ಮಿತ್ತಬಾಗಿಲು-ಬಂಗಾಡಿ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಅನೇಕ ವಿದ್ಯಾರ್ಥಿಗಳಿಗೆ ಸಂಗೀತ ಅಭ್ಯಾಸ ನಡೆಸುತ್ತಿರುವ ಪ್ರತಿಭಾನ್ವಿತೆಯಾಗಿದ್ದಾರೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು ಹಾಗೂ ಶುಭ ಹಾರೈಕೆಗಳು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ ಕೇಳಿದವರು : ವೈ ಪ್ರಸಾದ್ ಕುಮಾರ್** **ಉತ್ತರಿಸಿದವರು : ಡಾ। ವೈ. ಸುದರ್ಶನ ರಾವ್**

**ಪ್ರಶ್ನೆ : ತಜ್ಞ ವೈದ್ಯರು ಸೂಚಿಸಿರುವ ಎಲ್ಲಾ ಪರೀಕ್ಷೆಗಳೂ ನಾರ್ಮಲ್ ಎಂದಿದ್ದರೂ ಕೆಲವರಿಗೆ ಗ್ಯಾಸ್ಟ್ರಿಕ್ ಟ್ರಬಲ್ ಪದೇ ಪದೇ ಕಾಡಲು ಕಾರಣವೇನು? ಈ ಸಮಸ್ಯೆಗೆ ಪರಿಹಾರವೇನಿರಬಹುದು?**

**ಉತ್ತರ :** ಗ್ಯಾಸ್ ಟ್ರಬಲ್, ಅಸಿಡಿಟಿ, ಅಜೀರ್ಣ ಎಂದೆಲ್ಲಾ ಕುಖ್ಯಾತವಾಗಿರುವ ಈ ಖಾಯಿಲೆಯಿಂದ ತೊಂದರೆಗೀಡಾದವರು ವೈದ್ಯರಲ್ಲಿ ರಕ್ತ, ಮಲಮೂತ್ರ, ಎಂಡೋಸ್ಕೋಪಿ, ಸ್ಕ್ಯಾನ್ ಸಹಿತ ಎಲ್ಲಾ ತಪಾಸಣೆ ಮಾಡಿಸಿದ್ದು, ಅವುಗಳೆಲ್ಲವುಗಳ ವರದಿ ನಾರ್ಮಲ್ ಆಗಿದ್ದರೆ ಅವರಿಗೆ ಈ ಉತ್ತರವು ಖಂಡಿತ ಉಪಯುಕ್ತವಾಗುವುದೆಂದು ಭಾವಿಸುತ್ತೇನೆ.

1) ಜಠರದಲ್ಲಿ ಹೈಡ್ರೋಕ್ಲೋರಿಕ್ ಆಮ್ಲದ ಅಧಿಕ ಸ್ರಾವದಿಂದ ಉದ್ಭವಿಸುವ ಚಿಹ್ನೆಗಳು-ಎದೆ ಹಾಗೂ ಹೊಟ್ಟೆಉರಿ, ಬಾಯಿಯಲ್ಲಿ ಹುಳಿನೀರು ಬರುವುದು, ಹೊಟ್ಟೆಯ ಮೇಲ್ಭಾಗದಲ್ಲಿ ನೋವು, ವಾಂತಿ.
2) ಜೀರ್ಣಾಂಗವ್ಯೂಹದಲ್ಲಿ ಕ್ರಿಮಿಭಾದೆ (ಜಂತು, ಬ್ಯಾಕ್ಟೀರಿಯ ಹಾಗೂ ಅಮೀಬಾ ಸಹಿತ) ನೀರು ಭೇದಿ, ಮಲದಲ್ಲಿ ರಕ್ತ ಹಾಗೂ ಸಿಂಬಳದಂತಹದ್ದು ಇರುವುದು. ಪದೇ ಪದೇ ಮಲ ವಿಸರ್ಜನೆಯ ತವಕ, ತಿಂದಕೂಡಲೇ ಮಲವಿಸರ್ಜನೆಯ ಕರೆಬರುವುದು, ಅಪಾನವಾಯು ಜಾಸ್ತಿ ಹೋಗುವುದು, ಇಡೀ ಹೊಟ್ಟೆಯಲ್ಲಿ ಕಂತಿದ ಹಾಗೆ ನೋವು, ಹೊಟ್ಟೆ ಉಬ್ಬರಿಸಿಕೊಳ್ಳುವುದು, ಹಸಿವು ಕಡಿಮೆ, ಹೊಟ್ಟೆಯಲ್ಲಿ ಗುಳುಗುಳು ಶಬ್ದ, ವಿಪರೀತವಾದ ವಾಂತಿ.
3) ಕರುಳಿನ ಉರಿಯೂತ (irritable bowel syndrome, ಕ್ರಿಮಿಬಾಧೆಯಿಂದಲ್ಲದ colitis ಇತ್ಯಾದಿ) ಪದೇ ಪದೇ ಮಲವಿಸರ್ಜನೆಯಾಗುವುದು ಅಥವಾ ಭೇದಿ ಸರಿಯಾಗಿ ಆಗದಿರುವುದು, ಹೊಟ್ಟೆನೋವು.

ಗ್ಯಾಸ್‌ಟ್ರಬಲ್ ಶುರುವಾಗಲು ಕಾರಣಗಳು ಈ ರೀತಿ ಇವೆ :

1. ಮದ್ಯಪಾನ, ಸಿಗರೇಟು ಸೇವನೆ ಹಾಗೂ ಅತಿಯಾದ ಖಾರ ಮತ್ತು ಮಸಾಲೆ ಮತ್ತು ಜಿಡ್ಡು ಪದಾರ್ಥದ ಉಪಯೋಗ
2. ಔಷಧಗಳ ಸೇವನೆ
3. ನಿಯಮಿತವಾಗಿ ಆಹಾರ ಸೇವಿಸದಿರುವುದು, ಉಪವಾಸವಿರುವುದು
4. ನಿದ್ರೆಗೆಡುವುದು, ಪ್ರಯಾಣ, ಮಾನಸಿಕ ಒತ್ತಡ
5. ಆಹಾರದಲ್ಲಿ ಶುಚಿತ್ವಕ್ಕೆ ಗಮನವಿಲ್ಲದಿರುವುದು

**ಗ್ಯಾಸ್ ಟ್ರಬಲ್‌ನಿಂದ ತಪ್ಪಿಸಿಕೊಳ್ಳಲು ಸುಲಭೋಪಾಯ**

1. ಆಮ್ಲೀಯತೆಯನ್ನು ಕಡಿಮೆ ಮಾಡುವ ಆಹಾರ ಪದಾರ್ಥಗಳಾದ ಎಳನೀರು, ಹಾಲು, ಗಂಜಿ, ಹಣ್ಣು ಹಂಪಲುಗಳನ್ನು ನಿಯಮಿತವಾಗಿ ಬಳಸುವುದು.
2. ಮದ್ಯಪಾನ, ಧೂಮಪಾನ ವರ್ಜಿಸುವುದು, ಅನಗತ್ಯವಾಗಿ ಔಷಧಿಗಳನ್ನು ಸೇವಿಸದಿರುವುದು.
3. ಸಾತ್ವಿಕ ಆಹಾರದ ಬಳಕೆ, ಸಾಕಷ್ಟು ನಿದ್ರೆ, ವ್ಯಾಯಾಮ, ಸಮಚಿತ್ತದ ಜೀವನಶೈಲಿ
4. ಶುಚಿತ್ವದ ಸುಲಭಕ್ರಮಗಳಾದ ಶೌಚದ ನಂತರ ಮತ್ತು ಊಟದ ಮೊದಲು ಸಾಬೂನು ಬಳಸಿ ಕೈ ತೊಳೆಯುವುದು, ಆಹಾರ ಪದಾರ್ಥಗಳನ್ನು ಹೆಚ್ಚುವ ಮೊದಲು ತೊಳೆಯುವುದು, ತಂಗಳು ಹಾಗೂ ಹಳಸಿದ ಪದಾರ್ಥ ಉಪಯೋಗಿಸದಿರುವುದು ಇತ್ಯಾದಿ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

ಗ್ಯಾಸ್ಟ್ರಿಕ್ ಟ್ರಬಲ್ ಎಂದು ಕಡೆಗಣಿಸದಿರಿ, ಈ ಎಲ್ಲಾ ಚಿಹ್ನೆಗಳ ಹಿಂದೆ, ಅದೂ ಮಧ್ಯವಯಸ್ಕರಲ್ಲಿ ಹೊಟ್ಟೆ ಹುಣ್ಣು ಅಥವಾ ಕ್ಯಾನ್ಸರ್‌ನಂತಹ ಕಾಯಿಲೆಗಳು ಅಡಗಿರಬಹುದು. ತಜ್ಞವೈದ್ಯರಲ್ಲೊಮ್ಮೆ ತಪಾಸಣೆ ಮಾಡಿಸಿಕೊಳ್ಳಿ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು.**

**ಸಂಚಾರಿ ದೂರವಾಣಿ ನಂ. : 98451 36322**

## ಅರ್ಚಕರು ಬೇಕಾಗಿದ್ದಾರೆ

### ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು, ಉಡುಪಿ

ಶ್ರೀ ಶಾರದಾ ದೇವಸ್ಥಾನಕ್ಕೆ ಪೂಜಾ ವಿಧಿ-ವಿಧಾನಗಳನ್ನು ಬಲ್ಲ ಓರ್ವ ಅರ್ಚಕರು ಬೇಕಾಗಿದ್ದಾರೆ. ಅರ್ಚಕರಿಗೆ ವಾಸ್ತವ್ಯಕ್ಕೆ ಮನೆ ವ್ಯವಸ್ಥೆಯಿದ್ದು, ಪೂರ್ಣಾವಧಿ ಶ್ರೀ ಶಾರದಾ ದೇವಸ್ಥಾನದಲ್ಲಿ ಇರಬೇಕಾಗುತ್ತದೆ.

*ಆಸಕ್ತರು ಕೂಡಲೇ ವಿವರಗಳೊಂದಿಗೆ ಸಂಪರ್ಕಿಸಿರಿ :*

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು , ಉಡುಪಿ-2.**

## ಶಾಲಿಪುರ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ಕೊಕ್ರಾಡಿ, ಬೆಳ್ತಂಗಡಿ ತಾಲೂಕು, ದ.ಕ.

ಆಸ್ತಿಕ ಬಾಂಧವರಲ್ಲಿ ನಿವೇದನೆ,

ಜನರ ಭಕ್ತಿ ಶ್ರದ್ಧೆಗಳ ಕೇಂದ್ರವಾದ ದೇವಾಲಯಗಳು ನಮ್ಮ ಸಂಸ್ಕೃತಿಯ ಸಂವರ್ಧನೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಸುಮಾರು 800 ವರ್ಷಗಳ ಹಿಂದೆ ಪ್ರತಿಷ್ಠಾಪನೆಗೊಂಡು ತುಳುನಾಡಿನ ಬೈರವ ಅರಸರ ಕಾಲದಲ್ಲಿ ನಾರಾವಿ ಮಾಗಣೆಗೆ ಒಳಪಟ್ಟ ಕೊಕ್ರಾಡಿ ಗ್ರಾಮ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರ ಅತಿಶಯ ಭಕ್ತಿಯ ಕೇಂದ್ರ ಶಾಲಿಪುರ (ಸಾಲಿಯೂರು) ಶ್ರೀ ಸುಬ್ರಹ್ಮಣ್ಯ ದೇವಾಲಯ.

ಗುರುವಾಯನಕೆರೆ ನಾರಾವಿ ರಾಜಮಾರ್ಗದಲ್ಲಿ ಗುರುವಾಯನಕೆರೆಯಿಂದ ಸುಮಾರು 17ಕಿ.ಮೀ. ದೂರದಲ್ಲಿ ಹಾಗೂ ವೇಣೂರು – ನಾರಾವಿ ಮಾರ್ಗದಲ್ಲಿ ವೇಣೂರಿನಿಂದ 11ಕಿ.ಮೀ. ದೂರದ ಕೊಕ್ರಾಡಿ ಗ್ರಾಮದಲ್ಲಿ ನಯನ ಮನೋಹರ ರಮಣೀಯ ಸ್ಥಳದಲ್ಲಿ ಈ ದೇವಾಲಯವಿದೆ. ಇಲ್ಲಿ ಪ್ರಧಾನ ದೇವರು ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಉಪದೇವತೆಯಾಗಿ ಶ್ರೀ ಮಹಾಗಣಪತಿ ದೇವರು, ಮೂಲಶಕ್ತಿಯಾಗಿ ಶ್ರೀ ನಾಗದೇವರುಗಳನ್ನು ಪ್ರತಿಷ್ಠಾಪಿಸಿಲಾಗಿದೆ. ಇದಲ್ಲದೆ ಈ ಪುಣ್ಯಕ್ಷೇತ್ರದಲ್ಲಿ ಕೊಡಮಣಿತ್ತಾಯ ಪಂಜುರ್ಲಿ ಮತ್ತು ರಕ್ತೇಶ್ವರಿಯಾದಿ ಪಂಚದೈವಗಳ ಸಾನ್ನಿಧ್ಯವಿದೆ. ಸದ್ಯ ದೇವಸ್ಥಾನ ಜೀರ್ಣಾವಸ್ಥೆಯಲ್ಲಿದ್ದು ಶೀಘ್ರಾತಿಶೀಘ್ರ ಜೀರ್ಣೋದ್ಧಾರಗೊಳ್ಳಬೇಕಾದ ತುರ್ತು ಅವಶ್ಯಕತೆ ಇದೆ. ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹ ಪಡೆದು ಈ ಕೆಲಸಕ್ಕೆ ನಾವು ತೊಡಗಿರುತ್ತೇವೆ. ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳು ಸಂರಕ್ಷಕರಾಗಿ ನಮ್ಮನ್ನು ಮುನ್ನಡೆಸಲು ಅನುಗ್ರಹಿಸಿರುತ್ತಾರೆ. ತಾ.04-12-2008 ರಂದು ಶಿಲಾಮುಹೂರ್ತದಿಂದ ಮೊದಲ್ಗೊಂಡು ಶಿಲಾಮಯ ಗರ್ಭಗುಡಿ, ತೀರ್ಥಮಂಟಪ ಹಾಗೂ ಗಣಪತಿ ದೇವರ ಗುಡಿಗಳನ್ನು ನಿರ್ಮಿಸಲು ಸಂಕಲ್ಪಿಸಲಾಗಿದೆ. ಸುತ್ತುಪೌಳಿ, ವಸಂತ ಮಂಟಪ, ಅಡುಗೆ ಕೋಣೆ, ತೀರ್ಥಬಾವಿ, ದೇವಾಲಯದ ಕಾರ್ಯಾಲಯ ಹಾಗೂ ದೈವಗಳ ಗುಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳಿಗೆ ರೂಪಾಯಿ 50ಲಕ್ಷ ವೆಚ್ಚ ತಗಲುವುದೆಂದು ಅಂದಾಜಿಸಲಾಗಿದೆ.

ಈಗಾಗಲೇ ದಿನಾಂಕ 18-08-2007ರಂದು ಶ್ರೀ ಮುನಿಯಂಗಳ ಮಹೇಶ ಭಟ್ಟರ ನಿರ್ದೇಶನದಲ್ಲಿ ಶ್ರೀ ನಾಗದೇವರಿಗೆ ಸುಮಾರು ರೂಪಾಯಿ ಒಂದು ಲಕ್ಷ ವೆಚ್ಚದಲ್ಲಿ ನೂತನ ಚಿತ್ರಕೂಟವನ್ನು ನಿರ್ಮಿಸಿ ದೇವಸ್ಥಾನದಲ್ಲಿದ್ದ 18 ಪುರಾತನ ನಾಗಬಿಂಬಗಳನ್ನು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಪುನಃಪ್ರತಿಷ್ಠಾಪಿಸಲಾಗಿದೆ.

ಈಗ ಕೈಗೆತ್ತಿಕೊಂಡಿರುವ ಸಂಪೂರ್ಣ ಜೀರ್ಣೋದ್ಧಾರ ಕೆಲಸವು ಶ್ರೀದೇವರ ಹಾಗೂ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹದಿಂದ, ಭಕ್ತಮಹಾಜನರ ತನು-ಮನ-ಧನಗಳ ಸಹಕಾರದಿಂದ ನಡೆಯಬೇಕಾಗಿದೆ. ಬಿಂದುಗಳು ಕೂಡಿ ಸಿಂಧುವಾಗಬೇಕಾಗಿದೆ. ಇದನ್ನು ಮನಗಂಡು ಆಸ್ತಿಕ ಮಹಾಜನರು ಈ ಧಾರ್ಮಿಕ ಮಹಾಕಾರ್ಯಕ್ರಮಕ್ಕೆ ಸರ್ವರೀತಿಯ ಸಹಾಯ ಮಾಡಬೇಕಾಗಿ ವಿನಂತಿಸುತ್ತೇವೆ.

ತಮಗೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ, ಶ್ರೀ ಮಹಾಗಣಪತಿ, ಶ್ರೀ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಅನುಗ್ರಹವಾಗಿ ಸಕಲ ಸನ್ಮಂಗಲವು ಲಭಿಸಲೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

**– ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಸರ್ವಸದಸ್ಯರು, ಜೀರ್ಣೋದ್ಧಾರ ಸಮಿತಿ.**

## ವಧು-ವರರ ವೇದಿಕೆ

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ಸಮಾಜದ ವಿವಾಹ ಯೋಗ್ಯ ವಧು-ವರರ ನೋಂದಾವಣೆ, ವಿವಿಧ ಮಾಹಿತಿ ಮೊದಲಾದವುಗಳನ್ನು ಆಸಕ್ತಹೆತ್ತವರು ಪಡೆದುಕೊಂಡು ಪರಸ್ಪರ ವಿಚಾರ ವಿನಿಮಯ ಮಾಡಲು ಅವಕಾಶವಿದೆ. ಸಮಾಜ ಬಾಂಧವರು ವೇದಿಕೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.

**– ಅಧ್ಯಕ್ಷರು, ವಧೂವರರ ವೇದಿಕೆ, ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**

## ಬೇಕಾಗಿದ್ದಾರೆ

### ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು

ಎಲ್.ನಂ.366, ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಮಂಗಳೂರು – 3.

**ಹುದ್ದೆ : ಅಸಿಸ್ಟೆಂಟ್ ಮೆನೇಜರ್**

**ಅರ್ಹತೆ : ಬಿಕಾಂ ಅಥವಾ ಜಿಡಿಸಿ ಅಥವಾ ವಿಶ್ವವಿದ್ಯಾಲಯದ ಯಾವುದೇ ಪದವಿ ಮತ್ತು ಸಹಕಾರಿ ಸಂಘ/ಬ್ಯಾಂಕ್‌ಗಳಲ್ಲಿ ಕೆಲಸದ ಅನುಭವ**

*ಕೂಡಲೇ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ :*

**– ಕಾರ್ಯದರ್ಶಿ**



## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

**ಕುಂಜಿಬೆಟ್ಟು, ಉಡುಪಿ – 2.**

### ಲಕ್ಷ ಕುಂಕುಮಾರ್ಚನೆ

''ಜಪತೋ ಮಂತ್ರದೇವತಾ ಜಾಯತೇ'' - ಮಂತ್ರೋಚ್ಚಾರದಿಂದ ಆಯಾ ಮಂತ್ರದ ಅಧಿದೇವತೆಯ ಸಾನ್ನಿಧ್ಯ ಉಂಟಾಗುತ್ತದೆ ಎಂಬ ಆಗಮಶಾಸ್ತ್ರದ ವಚನದಂತೆ - ಶ್ರೀ ಶಾರದಾಮಂದಿರದಲ್ಲಿ ದೈವೀಶಕ್ತಿಯ ಅಭಿವೃದ್ಧಿಗಾಗಿ **ಶ್ರೀ ಲಲಿತಾ ಸಹಸ್ರನಾಮಗಳಿಂದ ''ಲಕ್ಷ ಕುಂಕುಮಾರ್ಚನೆ''**ಯನ್ನು **ತಾ.15-03-2009**, ಆದಿತ್ಯವಾರದಂದು ರಜತೋತ್ಸವ ವರ್ಷಾಚರಣೆಯ ಅಂಗವಾಗಿ ನೆರವೇರಿಸಲು ಸಂಕಲ್ಪಿಸಲಾಗಿದೆ.

**ಲಕ್ಷಕುಂಕುಮಾರ್ಚನೆಗಾಗಿ 25 ದಂಪತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು.** ದಂಪತಿಗಳಲ್ಲೊಬ್ಬರಾದರೂ ಸಹಸ್ರನಾಮ ತಿಳಿದವರಾಗಿರಬೇಕು. ದಂಪತಿಗಳು ಮಡಿಮಾಡಿಕೊಂಡು ಮಡಿವಸ್ತ್ರ ಧರಿಸಿರಬೇಕು. (ಪಂಚಪಾತ್ರೆ-ಹಣ್ಣುಕಾಯಿ, ಕಾಲುದೀಪ, ತುಪ್ಪ 1 ಕುಡ್ತೆ ಮತ್ತು ಹೂ ತರಬೇಕು), ಇತರರೂ ಪಾರಾಯಣದಲ್ಲಿ ಸೇರಿಕೊಳ್ಳಬಹುದು.

ಇಪ್ಪತ್ತೈದು ಜನ ದಂಪತಿಗಳು ನಾಲ್ಕು ಆವರ್ತ ಅರ್ಚನೆ ಮಾಡಿದಾಗ ಲಕ್ಷ ಸಂಖ್ಯೆ (ಲಕ್ಷ ಕುಂಕುಮಾರ್ಚನೆ) ಪೂರೈಸುತ್ತದೆ.

ಭಾಗವಹಿಸಲಿಚ್ಛಿಸುವವರು ತಾ.10-03-2009ರ ಒಳಗೆ ಸಂಘದ ಮೆನೇಜರ್‌ರನ್ನು ಸಂಪರ್ಕಿಸಬಹುದು.

**– ಅಧ್ಯಕ್ಷರು ಮತ್ತು ಸಂಚಾಲಕರು, ಶ್ರೀಶಾರದಾ ದೇವಸ್ಥಾನ ವೇದಿಕೆ**

## ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿ ಬುಧವಾರ

## ಸೌಂದರ್ಯಲಹರೀ ಪಾರಾಯಣ



ಆಚಾರ್ಯ ಶಂಕರಭಗವತ್ಪಾದರಿಂದ ರಚಿತವಾದ ಸೌಂದರ್ಯಲಹರೀ ಸ್ತೋತ್ರವು ಸ್ತೋತ್ರಗಳಲ್ಲಿಯೇ ವಿಶಿಷ್ಟವಾದದ್ದು. ಇದು ಶಕ್ತಿ, ವಿದ್ಯೆ ಹಾಗೂ ಲಕ್ಷ್ಮೀಸ್ವರೂಪಿಣಿಯಾದ ವಿಶ್ವಮಾತೆಯನ್ನು ಕುರಿತಾದ ಸ್ತೋತ್ರ. ಇದರ ಒಂದು ಪದ್ಯದಲ್ಲಿ ಆಚಾರ್ಯರು-''ತಾಯೀ! ನೀನು ಸರಸ್ವತೀ, ಲಕ್ಷ್ಮೀ, ಪಾರ್ವತೀ ಮಾತ್ರವಾಗಿರದೆ ಇವೆಲ್ಲವನ್ನು ಮೀರಿದ ತುರೀಯಳೂ ಪರಮಾನಂದಸ್ವರೂಪಳೂ, ಪರಬ್ರಹ್ಮನ ಶಕ್ತಿಯೂ ಆಗಿದ್ದೀಯ''-ಎಂದು ವರ್ಣಿಸುತ್ತಾರೆ. ಸಾಕಾರವಾಗಿ ಪೂಜೆಗೊಳ್ಳುವ ಅನೇಕ ದೇವಾನುದೇವತೆಗಳ ನಿರಾಕಾರ ಮೂಲಸ್ರೋತ ಅವಳು. ಆದ್ದರಿಂದ ಜಗನ್ಮಾತೆಯ ಅರ್ಚನೆ ಸಕಲದೇವತೆಗಳ ಅರ್ಚನೆ. ನಾನಾ ದೇವತೆಗಳ ಆಕಾರವನ್ನೇ ನೆಚ್ಚಿಕೊಂಡು ಆ ಮೂಲಕ ವಿಚ್ಛಿದ್ರತೆಯತ್ತ ಸಾಗುತ್ತಿರುವ ಸಮಾಜದಲ್ಲಿ ದೇವಿಯ ಆರಾಧನೆ ಭಾವೈಕ್ಯವನ್ನು ಭದ್ರಗೊಳಿಸುವ ದಿವ್ಯೌಷಧವಾಗಬಲ್ಲದು. ಅದೂ ಅಲ್ಲದೆ, ಇದು ಕೇವಲ ಸ್ತೋತ್ರಮಾತ್ರವಾಗಿರದೆ ಇದರಲ್ಲಿಯ ಒಂದೊಂದು ಪದ್ಯವೂ ಒಂದೊಂದು ಮಂತ್ರವಾಗಿದೆ. ಬಲ, ವಿದ್ಯೆ, ಸಂಪತ್ತು, ಸಂಗೀತ ನೈಪುಣ್ಯ, ಪುತ್ರಪ್ರಾಪ್ತಿ, ಆರೋಗ್ಯಭಾಗ್ಯ, ಜ್ವರ ಮತ್ತು ಗ್ರಹದೋಷಗಳ ನಿವಾರಣೆ ಇವುಗಳಿಗೆ ಸಾಧಕರು ಈ ಸ್ತೋತ್ರಗಳನ್ನು ಪಠಿಸಿ ಫಲವನ್ನು ಪಡೆದಿದ್ದಾರೆ. ತಮ್ಮ ಅನುಭವವನ್ನು ಇತರರೊಡನೆ ಹಂಚಿಕೊಂಡಿದ್ದಾರೆ. ಸೌಂದರ್ಯಲಹರಿಯ ಪಾರಾಯಣಕ್ಕೆ ಜಾತಿ-ಮತ-ವಯಸ್ಸು-ಲಿಂಗಗಳ ನಿಯಮವಿಲ್ಲ. ಯಾರಾದರೂ ಸರಿಯೆ ನಿಶ್ಚಲಭಕ್ತಿಯಿಂದ ಇದನ್ನು ಪಠಿಸಿ ಮನಃಶಾಂತಿಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ವೇದಾಂತಭಾರತೀ ಮೈಸೂರು ಇವರಿಂದ ಪ್ರಕಟಿತ ''ಸೌಂದರ್ಯಲಹರೀ'' ಎಂಬ ಪುಸ್ತಕದಲ್ಲಿ ತಿಳಿಸಲಾಗಿದೆ.

**ಪ್ರತಿ ಬುಧವಾರ ಸಂಜೆ ಗಂಟೆ 5-00ರಿಂದ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಶ್ರೀ ಶಾರದಾ ದೇವಸ್ಥಾನದಲ್ಲಿ ಶ್ರೀ ಶಂಕರಭಗವತ್ಪಾದ ವಿರಚಿತ ಪುಣ್ಯ ಕೃತಿ ಶ್ರೀ ದೇವಿ ಸ್ತೋತ್ರ "ಸೌಂದರ್ಯಲಹರೀ" ಪಾರಾಯಣ ನಡೆಯುತ್ತಿದೆ. ನಮ್ಮ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.**

**– ಮಹಿಳಾ ವೇದಿಕೆ**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

**ಕುಂಜಿಬೆಟ್ಟು, ಉಡುಪಿ – 2.**

ನಮ್ಮ ಸಂಘದ ಆಶ್ರಯದಲ್ಲಿ

### ಶ್ರೀ ಶಂಕರಜಯಂತಿ ಕಾರ್ಯಕ್ರಮವು

**ತಾ.30-04-2009 ಗುರುವಾರದಂದು ನಡೆಯಲಿದೆ. ಇದೇ ದಿನ**

## ಸಾಮೂಹಿಕ ಉಪನಯನ ಕಾರ್ಯಕ್ರಮವೂ

**ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ.**


**ಸರ್ವರಿಗೂ ಆದರದ ಸ್ವಾಗತ :**

**– ಕಾರ್ಯದರ್ಶಿ**

ಆಸಕ್ತ ಸಮಾಜ ಬಾಂಧವರು ಇದರಲ್ಲಿ ಪಾಲ್ಗೊಳ್ಳಲಿರುವ ವಟುಗಳ ವಿವರಗಳನ್ನು ತಾ.20-04-2009ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ಕೋರಲಾಗಿದೆ.


## ದೇವಿಕೃಪಾ ಏಜೆನ್ಸೀಸ್, ನಂದಿಕೂರು

**ಫೋನ್ : 2556536 (R), 2555466 (O)**



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


Owned & Published by : K. Venugopal Rao, Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org